ಮಾತನಾಡುವ ಮೈನಾ ಹಕ್ಕಿ

✍ ಮಾಯಿಲ್ ಖೈರಾಬಾದಿ

MATHANAADUWA MAINA HAKKI
[AKHLAQUI KAHANIYAN (Urdu)]

Author : MAYIL KHAIRABADI

Translator : B.S. SHARFUDDIN

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಉರ್ದು ಬಾಲ ಸಾಹಿತ್ಯ ಜಗತ್ತಿನ ಅತ್ಯಂತ ಜನಪ್ರಿಯ ಹಾಗೂ ಹಿರಿಯ ಲೇಖಕರಲ್ಲೊಬ್ಬರಾದ 'ಹಿಜಾಬ್' ಉರ್ದು ಮಾಸಿಕದ ಸಂಪಾದಕ ಮರ್ಹೂಮ್ ಡಾ| ಮಾಯಿಲ್ ಖೈರಾಬಾದಿ, ಅವರ ಕೆಲವು ಆಯ್ದ ಕಿರುಕತೆಗಳ ಸಂಗ್ರಹವೇ 'ಮಾತನಾಡುವ ಮೈನಾ ಹಕ್ಕಿ.'

ಇಲ್ಲಿ ಆರಿಸಲಾಗಿರುವ ಕಥೆಗಳೆಲ್ಲವೂ ನೀತಿಕಥೆಗಳು. ಪುಟಾಣಿಗಳಲ್ಲಿ ರಚನಾತ್ಮಕ ಮನೋಭಾವವನ್ನು ಬೆಳೆಸುವಲ್ಲಿ ಅವು ಸಹಾಯಕವಾಗಿವೆ. ಮಕ್ಕಳ ಮನಸ್ಸನ್ನು ಚೆನ್ನಾಗಿ ಓದಿರುವ ಕಥೆಗಾರರು ಬಳಸಿರುವ ಶೈಲಿ ಚೇತೋಹಾರಿಯಾಗಿದೆ. ಈ ಕಥೆಗಳನ್ನು ಉರ್ದುವಿನಿಂದ ಕನ್ನಡಕ್ಕೆ ಬಿ.ಎಸ್. ಶರ್ಫುದ್ದೀನ್ ಅನುವಾದಿಸಿದ್ದಾರೆ.

ಇದು ಈ ಕೃತಿಯ ಐದನೆಯ ಮುದ್ರಣ. ಮಕ್ಕಳಿಗಾಗಿ ಇಂತಹ ಹೊತ್ತಗೆಗಳನ್ನು ಪ್ರಕಟಿಸುವ ನಮ್ಮ ಯೋಜನೆ ಯಶಸ್ವಿಯಾಗಲು ಸಾಹಿತ್ಯಾಭಿಮಾನಿಗಳ ತುಂಬು ಹೃದಯದ ಪ್ರೋತ್ಸಾಹವೇ ಕಾರಣ. ಓದುಗರಿಂದ ಮುಂದೆಯೂ ಅಂತಹದೇ ಪ್ರೋತ್ಸಾಹವನ್ನು ನಿರೀಕ್ಷಿಸುತ್ತೇವೆ.

ಶಾಂತಿ ಪ್ರಕಾಶನ



ಅನುಕ್ರಮಣಿಕೆ

ಸಿರಿವಂತನಾದ ಭಿಕ್ಷುಕ

ಒಂದೂರಿನಲ್ಲಿ ಒಬ್ಬ ವ್ಯಾಪಾರಿ ಇದ್ದ. ದೇವನು ಅವನಿಗೆ ತುಂಬಾ ಸಂಪತ್ತನ್ನು ದಯಪಾಲಿಸಿದ್ದ. ಆದರೆ ಅವನು ಕಡು ಜಿಪುಣನಾಗಿದ್ದ. ಚಿಕ್ಕಾಸನ್ನು ವ್ಯಯಿಸುವುದೆಂದರೂ ಅವನಿಗೆ ಪ್ರಾಣ ಸಂಕಟ.

ಒಮ್ಮೆ ಅವನು ಪತ್ನಿ ಸಮೇತನಾಗಿ ಊಟ ಮಾಡುತ್ತಿದ್ದ. ರುಚಿಕರವಾದ ಮಾಂಸದ ತಿನಿಸುಗಳನ್ನು ಅವನ ಮುಂದೆ ಇಡಲಾಗಿತ್ತು. ಅದನ್ನು ಅವನು ತುಂಬಾ ಮೆಚ್ಚುತ್ತಿದ್ದ. ಅದೇ ಹೊತ್ತಿಗೆ ಒಬ್ಬ ಭಿಕ್ಷುಕ ಅವರ ಮುಂದೆ ಬಂದು



"ದೇವನ ಹೆಸರಲ್ಲಿ ಏನಾದರೂ ಕೊಡಿ" ಎಂದು ಅಂಗಲಾಚಿದ. ಇದನ್ನು ಕೇಳಿ ವ್ಯಾಪಾರಿಯ ಪತ್ನಿ ಆತನೊಂದಿಗೆ ಹೇಳಿದಳು: "ದೇವನು ನಮಗೆ ಸಾಕಷ್ಟು ಸಂಪತ್ತನ್ನು ದಯಪಾಲಿಸಿದ್ದಾನೆ. ಅದರಿಂದಾಗಿಯೇ ನಾವು ಈ ಭಕ್ಷ್ಯಭೋಜನ ಗಳನ್ನು ಸವಿಯುತ್ತಿದ್ದೇವೆ. ನೀವು ಅನುಮತಿ ಕೊಟ್ಟರೆ ಒಂದು ತುಂಡು ಮಾಂಸವನ್ನು ಆ ಭಿಕ್ಷುಕನಿಗೆ ಕೊಡಲೇ?" ಆದರೆ ಧನಿಕ ಅದಕ್ಕೆ ಒಪ್ಪಲಿಲ್ಲ. ಅವನು ಭಿಕ್ಷುಕನಿಗೆ ಜರೆದು ಅಲ್ಲಿಂದ ಓಡಿಸಿದನು. ಪತಿಯ ಈ ವರ್ತನೆಯಿಂದ ಧನಿಕನ ಪತ್ನಿ ದುಃಖಿತಳಾದಳು. ಆಕೆ ಸಂದರ್ಭ ಸಿಕ್ಕಾಗಲೆಲ್ಲಾ ಬಡವರಿಗೆ ಉಪಕಾರ ಮಾಡುವಂತೆ ತನ್ನ ಪತಿಗೆ ಉಪದೇಶ ಮಾಡುತ್ತಿದ್ದಳು. ಆದರೆ ಧನಿಕನಿಗೆ ಅದು ತೀರಾ ರುಚಿಸದ ಸಂಗತಿಯಾಗಿತ್ತು. ಪತ್ನಿಯ ಉಪದೇಶ ದಿಂದ ಅವನು ಅಸಮಾಧಾನ ತಾಳುತ್ತಿದ್ದ. ಕೊನೆಗೆ ಆಕೆಯ ಉಪದೇಶವನ್ನು ಸಹಿಸಲಾರದೆ ಅವನು ಆಕೆಯೊಂದಿಗೆ ವಿವಾಹ ವಿಚ್ಛೇದನ ಮಾಡಿಕೊಂಡ.

ಆಕೆ ಮತ್ತೊಬ್ಬ ವ್ಯಾಪಾರಿಯನ್ನು ಮದುವೆಯಾದಳು. ಇಬ್ಬರೂ ಸಂತೋಷದಿಂದ ಬಾಳ ತೊಡಗಿದರು. ದಿನಂಪ್ರತಿ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದರು. ಒಂದು ದಿನ ಅವರು ಹುರಿದ ಮಾಂಸವನ್ನು ಸೇವಿಸುತ್ತಿದ್ದರು. ಅದೇ ಹೊತ್ತಿಗೆ ಹೊರಗಿನಿಂದ ಒಬ್ಬ ಭಿಕ್ಷುಕನ ಧ್ವನಿ ಕೇಳಿ ಬಂತು.

"ಅಲ್ಲಾಹನ ಹೆಸರಲ್ಲಿ ಏನಾದರೂ ಕೊಡಿ. ನಾನು ಹಸಿದು ಕಂಗಾಲಾಗಿದ್ದೇನೆ."

ಇದನ್ನು ಕೇಳಿ ವ್ಯಾಪಾರಿಯ ಪತ್ನಿ ಹೇಳಿದಳು, "ಅಲ್ಲಾಹನೇ ದಯಪಾಲಿಸಿರುವ ಈ ಮಾಂಸದ ತುಂಡನ್ನು ಅಲ್ಲಾಹನ ಸಂಪ್ರೀತಿ ಗಳಿಸಲು ಆ ಭಿಕ್ಷುಕನಿಗೆ ನೀಡಲೇ? ಅವನಿಚ್ಛಿಸಿದರೆ ನಮಗೆ ಇನ್ನಷ್ಟು ದಯಪಾಲಿಸುತ್ತಾನೆ."

ಇದಕ್ಕೆ ಪತಿಯು ಸಂತೋಷದಿಂದ ಒಪ್ಪಿಗೆ ಕೊಡುತ್ತಾನೆ. ಆಕೆ ಆ ಮಾಂಸ ತುಂಡನ್ನು ಭಿಕ್ಷುಕನಿಗೆ ನೀಡುತ್ತಾಳೆ. ಅಲ್ಲಿಂದ ಮರಳುವಾಗ ಅವಳ ಕಣ್ಣಂಚಿನಲ್ಲಿ ಕಂಬನಿ ಮಿಡಿಯುತ್ತದೆ. ಆಕೆ ಗೋಳೋ ಎಂದು ಅಳ ತೊಡಗುತ್ತಾಳೆ. ಇದನ್ನು ಕಂಡು ಆಕೆಯ ಪತಿ "ಯಾಕೆ ಅಳುತ್ತಿರುವೆ?" ಎಂದು ವಿಚಾರಿಸುತ್ತಾನೆ. ಮೊದಲು ಆಕೆ ಹೇಳಲು ನಿರಾಕರಿಸುತ್ತಾಳೆ. ಆದರೆ ಪತಿಯ ಒತ್ತಾಯಕ್ಕೆ ಮಣಿದು ಹೇಳ ತೊಡಗುತ್ತಾಳೆ:

"ಈಗ ಮನೆಗೆ ಬಂದಿದ್ದ ಭಿಕ್ಷುಕ ನನ್ನ ಹಿಂದಿನ ಪತಿ ಆಗಿದ್ದ. ಆತ ಮತ್ತೊಂದು ಊರಿನ ದೊಡ್ಡ ವ್ಯಾಪಾರಿಯಾಗಿದ್ದ. ನಿಮ್ಮಂತೆಯೇ ಅವನ ಬಳಿಯೂ

ಸಾಕಷ್ಟು ಸಂಪತ್ತು ಇತ್ತು. ಆದರೆ ಅವನು ಬಡಬಗ್ಗರಿಗೆ ದಾನನೀಡುತ್ತಿರಲಿಲ್ಲ. ನಾವು ದಿನಾಲೂ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದೆವು. ಒಂದು ದಿನ ನಾವು ಊಟ ಮಾಡುತ್ತಿದ್ದ ವೇಳೆ ಒಬ್ಬ ಭಿಕ್ಷುಕ ಬಂದು, "ಅಲ್ಲಾಹನ ಹೆಸರಲ್ಲಿ ಏನಾದರೂ ಕೊಡಿ" ಎಂದು ಬೇಡಿದನು. ಆದರೆ ಅವನು ಆತನನ್ನು ಜರೆದು ಅಟ್ಟಿದನು. ಆದರೆ ಕಾಲ ಎಷ್ಟು ಬೇಗ ಬದಲಾಯಿತು. ಇಂದು ಅವನು ಸ್ವತಃ ಭಿಕ್ಷುಕನಾಗಿ ನಮ್ಮ ಮನೆಬಾಗಿಲಿಗೆ ಬಂದನು. ಅಲ್ಲಾಹನು ಯಾರಿಗೆ ಬೇಕಾದರೂ ನೀಡುತ್ತಾನೆ. ಯಾರಿಂದ ಬೇಕಾದರೂ ಕಸಿದುಕೊಳ್ಳುತ್ತಾನೆ."

ಪತ್ನಿಯ ಈ ಮಾತುಗಳನ್ನು ಕೇಳಿ ವ್ಯಾಪಾರಿ ಪತಿ ಹೇಳಿದಳು. "ಆ ದಿನ ನಿಮ್ಮ ಬಳಿ ಬಂದಿದ್ದ ಭಿಕ್ಷುಕ ಮತ್ತಾರೂ ಅಲ್ಲ, ನಾನೇ ಆಗಿದ್ದೆ." ಈ ಘಟನೆಯನ್ನು ತಿಳಿದ ಇಬ್ಬರೂ ಯೋಚನೆಯಲ್ಲಿ ಮುಳುಗಿದರು.

❖❖❖

ಗಿಳಿರಾಯನ ತೀರ್ಪು

ಕತ್ತೆ ಮತ್ತು ಹೋರಿಯ ಮಧ್ಯೆ ಜಗಳ ಸಾಗಿತ್ತು.

"ಎಚ್ಚರಿಕೆ! ಇತ್ತ ಕಾಲಿಡಬಾರದು"

"ಇದನ್ನು ಹೇಳಲು ನೀನ್ಯಾರು?"

"ನಾನು ಯಾರೆಂದು ಈಗ ನಿನಗೆ ತೋರಿಸಲಾ?"

"ನೀನೇಕೆ ನನ್ನ ಹುಲ್ಲು ತಿಂದೆ?"

"ನೀನು ನನ್ನ ಹುಲ್ಲು ತಿಂದು ಈಗ ಕೊಚ್ಚಿಕೊಳ್ಳುತ್ತೀಯಾ?"

"ಹುಲ್ಲು ನಿನ್ನಪ್ಪನದೋ?"

"ಹೇಳಿದರೆ ಕೇಳಲ್ಲಾ, ಹಾಗಾದರೆ ನೋಡಿಕೋ!"

ಎನ್ನುತ್ತಾ ಹೋರಿ ತನ್ನ ಕೊಂಬಿನಿಂದ ಕತ್ತೆಯನ್ನು ತಿವಿಯಿತು. ಮೊನಚಾದ ಕೊಂಬು ಕತ್ತೆಯ ತೊಡೆಗೆ ನಾಟಿ ರಕ್ತ ಸೋರಲಾರಂಭಿಸಿತು. ಈ ಜಗಳ ನೋಡಿ ಸುತ್ತಮುತ್ತಲಿನ ಇತರ ಪ್ರಾಣಿಗಳೂ ಅಲ್ಲಿಗೆ ಓಡೋಡಿ ಬಂದುವು. ಕಾಡಿನ ಇತರ ಪ್ರಾಣಿಗಳೂ ಅಲ್ಲಿಗೆ ಹಾಜರಾದವು.

"ಓ ಕತ್ತೆಯೇ? ಏನಾಯಿತು. ಯಾಕೆ ಅಳುತ್ತಿರುವೆ?" ಎಲ್ಲಾ ಪ್ರಾಣಿಗಳೂ ಕತ್ತೆಯೊಡನೆ ಕೇಳಿದವು.

"ನೀವು ನೋಡುತ್ತಿಲ್ಲವೇ ಹೋರಿಯ ಈ ಅಕ್ರಮವನ್ನು. ನನ್ನ ತೊಡೆಯಿಂದ ರಕ್ತ ಹರಿಯುತ್ತಿದೆ, ನೋಡಿ."

ಕಾಡಿನ ಪ್ರಾಣಿಗಳು ಹೋರಿಯತ್ತ ತಿರುಗಿ ಪ್ರಶ್ನಿಸಿದವು, "ನೀನೇಕೆ ಕತ್ತೆಯನ್ನು ತಿವಿದೆ?"

ಹೋರಿ ಹೇಳಿತು, "ಆ ಕತ್ತೆ ನನ್ನ ಹುಲ್ಲಿಗೆ ಬಾಯಿ ಹಾಕಿತು."

ಹೋರಿಯ ಮಾತು ಕೇಳಿ ಅಲ್ಲಿದ್ದ ಕುದುರೆಗೆ ಸಿಟ್ಟು ಬಂತು, "ಏನಂದೆ! ಹುಲ್ಲು ನಿನ್ನದೋ, ಹುಲ್ಲನ್ನು ಅಧಿಕ ಇಷ್ಟಪಡುವವನು ನಾನು ಎಂದು ಎಲ್ಲರಿಗೂ ತಿಳಿದಿದೆ" ಎನ್ನುತ್ತಾ ಹೋರಿಯ ಬಳಿ ಹೋಗಿ ಎರಡು ಬಲವಾದ ಒದೆ ಕೊಟ್ಟಿತು.



ಹೋರಿಯು, ಒದೆತಕ್ಕೆ ತನ್ನ ಕೊಂಬಿನಿಂದ ಉತ್ತರ ನೀಡಬೇಕೆಂದು ಭಾವಿಸಿತು. ಆದರೆ ಸುತ್ತ ನಿಂತಿದ್ದ ಇತರ ಕಾಡು ಪ್ರಾಣಿಗಳನ್ನು ಕಂಡು ಅದು ಮೌನ ತಾಳಿತು.

ಆದರೆ ಕಾಟಿಗೆ ಸಿಟ್ಟು ಬಂತು. ಅದು ಕುದುರೆಯನ್ನು ಗದರಿಸುತ್ತಾ "ಹುಲ್ಲು ನಿನ್ನದಾಗುವುದು ಹೇಗೆ? ನಾನು ಅದರ ಯಜಮಾನ" ಎಂದು ಹೇಳಿ ಕುದುರೆಯನ್ನು ಎದುರು ಹಾಕಿಕೊಳ್ಳಲು ಮುಂದಡಿ ಇಟ್ಟಿತು.

ಅಷ್ಟರಲ್ಲಿ ಎಲ್ಲಾ ಪ್ರಾಣಿಗಳು ಮುಂದೆ ಬಂದು ಕಾಟಿಯನ್ನು ತಡೆದು ಹೇಳಿದವು.

"ಚೆನ್ನಾಗಿದೆ! ಕಾಡಿನ ಹುಲ್ಲು ಯಾರಾದರೊಬ್ಬನ ಸೊತ್ತಾದರೆ ಇತರರು ಹೇಗೆ ಬದುಕುತ್ತಾರೆ. ಇಲ್ಲಿಯವರೆಗೆ ನಾನು ಕಾಡಿನ ಯಜಮಾನ ಎಂದು ಯಾರೂ ವಾದಿಸಿರಲಿಲ್ಲ. ಈಗೇಕೆ ಜಗಳ ಆರಂಭವಾಯಿತು."

ಹೋರಿ, ಕತ್ತೆ, ಕುದುರೆ, ಕಾಟಿ ಮತ್ತಿತರ ಕೆಲವು ಪ್ರಾಣಿಗಳು ಇದಕ್ಕೆ ಒಪ್ಪಲಿಲ್ಲ. ಆದರೆ ಕಾಡಿನ ಎಲ್ಲಾ ಪ್ರಾಣಿಗಳ ಅಭಿಪ್ರಾಯವನ್ನು ವಿರೋಧಿಸುವುದು ಈ ಅಲ್ಪ ಸಂಖ್ಯೆಯ ಪ್ರಾಣಿಗಳಿಗೆ ಸಾಧ್ಯವಾಗಲಿಲ್ಲ. ಹುಲ್ಲಿನ ಯಜಮಾನ ಯಾರು ಎಂಬುದು ಪ್ರಶ್ನೆಯಾಗಿಯೇ ಉಳಿಯಿತು. ಕೊನೆಗೆ ಎಲ್ಲರೂ ಸೇರಿ ಗಿಳಿರಾಯನ ಬಳಿ ಹೋಗಿ ಕೇಳುವುದೆಂದು ನಿಶ್ಚಯಿಸಿದರು.

ಎಲ್ಲರೂ ಗಿಳಿರಾಯನ ಬಳಿ ಹೋಗಿ ವಿಷಯವನ್ನೆಲ್ಲಾ ತಿಳಿಸಿದರು. ಗಿಳಿರಾಯ ಸ್ವಲ್ಪ ಹೊತ್ತು ಆಲೋಚಿಸಿದ ಬಳಿಕ ಹೇಳಿತು, "ಹುಲ್ಲನ್ನು ಸೃಷ್ಟಿಸಿದವನೇ ಹುಲ್ಲಿನ ನೈಜ ಯಜಮಾನ, ನಿಮ್ಮಲ್ಲಿ ಹುಲ್ಲನ್ನು ಸೃಷ್ಟಿಸಲು ಯಾರಿಗೆ ಸಾಧ್ಯವಿದೆ? ನೀವು ಹುಲ್ಲಿನ ಯಜಮಾನರಾಗುವುದು ಹೇಗೆ?"

ಗಿಳಿರಾಯನ ಮಾತು ಕೇಳಿ ಎಲ್ಲಾ ಪ್ರಾಣಿಗಳು ಮೌನ ತಾಳಿದವು.

ಗಿಳಿರಾಯ ಮತ್ತೊಮ್ಮೆ ಕತ್ತು ಕೊಂಕಿಸಿ ಹೇಳಿತು:

"ಹುಲ್ಲಿನ ಸೃಷ್ಟಿಕರ್ತ ಯಾರೆಂದು ನಿಮಗೆ ಗೊತ್ತೇ?"

"ಹುಲ್ಲನ್ನು ಅಲ್ಲಾಹನು ಸೃಷ್ಟಿಸಿದ್ದಾನೆ" ಎಲ್ಲಾ ಪ್ರಾಣಿಗಳು ಏಕಕಂಠದಲ್ಲಿ ಹೇಳಿದವು.

"ಹಾಗಾದರೆ ಅವನೇ ಹುಲ್ಲಿನ ಯಜಮಾನನೂ ಆಗಿದ್ದಾನೆ" ಎಂದು ತೀರ್ಪು ನೀಡುತ್ತಾ ಗಿಳಿ ಹೇಳಿತು,

"ಹುಲ್ಲನ್ನು ಮಾತ್ರವಲ್ಲದೆ ಎಲ್ಲವನ್ನೂ ಸೃಷ್ಟಿಸಿದವನು ಅವನೇ ಆಗಿದ್ದಾನೆ. ಅಲ್ಲಾಹನ ಸೃಷ್ಟಿಯನ್ನು ತನ್ನದೆಂದು ಹೇಳುವವನು ಸುಳ್ಳಾಡುವವನೂ ಅಕ್ರಮಿಯೂ ಆಗಿದ್ದಾನೆ. ನೀವೆಲ್ಲಾ ಅಲ್ಲಾಹನು ಕರುಣಿಸಿದ ಆಹಾರವನ್ನು ತಿಂದು ಆತನಿಗೆ ಕೃತಜ್ಞತೆ ಸಲ್ಲಿಸಬೇಕು. ಮತ್ತು ಅಲ್ಲಾಹನ ಸೃಷ್ಟಿಗೆ ತಾನು ಯಜಮಾನ ಎಂದು ಹೇಳುವವರೊಂದಿಗೆ ಅವರು ಪಶ್ಚಾತ್ತಾಪ ಪಡುವ ತನಕ ಹೋರಾಡಬೇಕು."

ಗಿಳಿರಾಯನ ಮಾತುಗಳು ಎಲ್ಲರಿಗೂ ಹಿಡಿಸಿತು. ಹುಲ್ಲಿಗಾಗಿ ಜಗಳ ಕಾದ ಪ್ರಾಣಿಗಳು ಪಾಠ ಕಲಿತುಕೊಂಡವು. ಅನಂತರ ಎಲ್ಲ ಪ್ರಾಣಿಗಳೂ ಅತ್ತಿತ್ತ ಹರಡಿ ಹುಲ್ಲು ಮೇಯಲು ತೊಡಗಿದವು.

❖❖❖

ಹನ್ನೆರಡಾಣೆಯ ಟಿಕೇಟು

ಒಮ್ಮೆ ನಾನು ರೈಲು ನಿಲ್ದಾಣದಲ್ಲಿ ನಿಂತಿದ್ದೆ. ಅಲ್ಲೊಬ್ಬರು ಹನ್ನೆರಡಾಣೆಯ ಟಿಕೇಟು ಕೇಳುತ್ತಿದ್ದರು. ಸ್ಟೇಶನ್‌ನ ಅಧಿಕಾರಿ ಅವರೊಂದಿಗೆ ಹೇಳಿದರು. "ಇಲ್ಲಿ ಹನ್ನೆರಡಾಣೆಯ ಟಿಕೇಟು ಸಿಗುವುದಿಲ್ಲ. ಟಿಕೇಟು ಬೇಕಿದ್ದರೆ ಊರಿನ ಹೆಸರು ಹೇಳಿ."

ಆ ವ್ಯಕ್ತಿ ಹನ್ನೆರಡಾಣೆಯ ಟಿಕೇಟು ಕೇಳುತ್ತಿರುವುದನ್ನು ಕಂಡು ನನಗೂ ಆಶ್ಚರ್ಯವಾಯಿತು. ಆ ವ್ಯಕ್ತಿಗೆ ತಲೆ ಕೆಟ್ಟಿದೆಯೇ ಎಂದು ನಾನು ಆಲೋಚಿಸಿದೆ. ಆದರೆ ಆ ವ್ಯಕ್ತಿಯನ್ನು ದಿಟ್ಟಿಸಿ ನೋಡಿದಾಗ ಅವರು ನನಗೆ ಸಭ್ಯನಂತೆ ಕಂಡು ಬಂದರು. ನೀಟಾದ ಪೋಷಾಕು, ನಿಲುವಂಗಿ ಮತ್ತು ಟೊಪ್ಪಿ ಧರಿಸಿದ ಅವರು ಗಡ್ಡಧಾರಿಯಾಗಿದ್ದರು. ಅವರ ಮಾತುಗಳಿಂದ ಅವರೊಬ್ಬ ಸಜ್ಜನರಂತೆ ಕಂಡು ಬರುತ್ತಿದ್ದರು. ನಾನು ಅವರೊಂದಿಗೆ ಕೇಳಿದೆ,


"ನೀವು ಯಾವುದಾದರೂ ಸ್ಟೇಶನ್‌ನ ಟಿಕೇಟು ಕೇಳುವ ಬದಲು ಹನ್ನೆರಡಾಣೆಯ ಟಿಕೇಟನ್ನು ಯಾಕೆ ಕೇಳುತ್ತಿದ್ದೀರಿ?"

ಅವರು ನಿಖರವಾಗಿ ಹೇಳಿದರು, "ನನಗೆ ಹನ್ನೆರಡಾಣೆಯ ಟಿಕೇಟೇ ಬೇಕು?"

ಅವರು ಮತ್ತೆ ಸ್ಟೇಶನ್ ಅಧಿಕಾರಿಯತ್ತ ತಿರುಗಿ ಕೇಳಿದರು, "ಇಲ್ಲಿಂದ ಯಾವುದಾದರೂ ನಿಲ್ದಾಣದ ಟಿಕೇಟಿಗೆ ಹನ್ನೆರಡಾಣೆ ಇದೆಯೇ?"

ಅಧಿಕಾರಿ ಹೌದು ಎಂದು ತಲೆಯಲ್ಲಾಡಿಸಿದ, "ಹಾಗಾದರೆ ಅಲ್ಲಿಯ ಟಿಕೇಟನ್ನೇ ಕೊಡಿ" ಎಂದು ಆ ವ್ಯಕ್ತಿ ಆತುರಪಡಿಸಿತು.

ಅಧಿಕಾರಿ ಹನ್ನೆರಡಾಣೆ ಪಡೆದುಕೊಂಡು ಒಂದು ಟಿಕೇಟು ಕೊಟ್ಟರು. ಆ ವ್ಯಕ್ತಿ ಟಿಕೇಟನ್ನು ತೆಗೆದುಕೊಂಡು ಅದನ್ನು ಅಲ್ಲೇ ಹರಿದು ಹಾಕಿ ಒಂದು ದಿಕ್ಕಿಗೆ ಚಲಿಸಿದರು. ನನಗೆ ಮತ್ತಷ್ಟು ಆಶ್ಚರ್ಯವಾಯಿತು. "ಈ ವ್ಯಕ್ತಿ ನೋಡಲಿಕ್ಕೆ ಮಾತ್ರ ಚೆನ್ನಾಗಿರುವಂತೆ ಕಂಡು ಬರುತ್ತಿದ್ದಾರೆ. ಆದರೆ ತಲೆ ಕೆಟ್ಟಿರುವುದಂತೂ ಖಂಡಿತ" ಎಂದು ನಾನು ಮನಸ್ಸಿನಲ್ಲೇ ಲೆಕ್ಕ ಹಾಕಿಕೊಂಡೆ. ನಾನು ಅವರನ್ನೇ ದಿಟ್ಟಿಸಿ ನೋಡಿದೆ. ಅವರನ್ನು ಭೇಟಿಯಾಗಿ ನಿಜ ಸಂಗತಿಯನ್ನು ಅರಿಯಬೇಕು ಎಂದು ಮನಸ್ಸು ಪ್ರೇರೇಪಿಸುತ್ತಿತ್ತು. ಅವರ ಹಿಂದೆಯೇ ನಡೆದೆ.



ಅವರು ಬೇರೊಂದು ಬೀದಿಗೆ ತಿರುಗಿ ಮುಂದೆ ಸಾಗುತ್ತಿದ್ದರು. ನಾನು ರಭಸದಿಂದ ನಡೆದು ಅವರ ಬಳಿಗೆ ತಲಪಿದೆ. "ನೀವು ಟಿಕೇಟು ತೆಗೆದು ಹರಿದು ಬಿಟ್ಟಿರಲ್ಲಾ ಏಕೆ?" ಎಂದು ಕೇಳಿದೆ.

ಅವರು ನನ್ನತ್ತ ನೋಡಿ ನಕ್ಕು ಹೇಳಿದರು, "ಬನ್ನಿ ಸಮೀಪದಲ್ಲೇ ನನ್ನ ಮನೆಯಿದೆ. ಅಲ್ಲಿಗೆ ಹೋಗಿ ಸಾವಕಾಶದಿಂದ ಕುಳಿತು ಮಾತನಾಡೋಣ."

ನಾನು ಅವರ ಜೊತೆಗೆ ನಡೆಯ ತೊಡಗಿದೆ. ಎರಡು ನಿಮಿಷ ನಡೆಯುವಷ್ಟರಲ್ಲೇ ಅವರ ಮನೆ ಬಂತು. ಅವರು ಕೋಣೆಯ ಬಾಗಿಲು ತೆರೆದರು. ನಾನು ಕುಳಿತು ಕೊಂಡೆ. ಅವರು ವಿಷಯವನ್ನೆಲ್ಲಾ ವಿವರಿಸತೊಡಗಿದರು.

"ನನ್ನ ಅಣ್ಣನ ಮಗ ಕಾನ್ಪುರದಿಂದ ವಾಪಾಸು ಬರುವಾಗ ಅವನ ಜೊತೆಯಲ್ಲಿ ಕೆಲವು ಹುಡುಗರು ಮತ್ತೊಬ್ಬ ಹಿರಿಯ ವ್ಯಕ್ತಿ ಇದ್ದರು. ಅವರು ನನ್ನ ಅಣ್ಣನ ಮಗನ ಟಿಕೇಟು ತೆಗೆದುಕೊಳ್ಳಲು ಮರೆತಿದ್ದರು. ಲಕ್ನೋದಲ್ಲಿ ಎಲ್ಲರೂ ಕೆಳಗಿಳಿದಾಗ ಆ ಹಿರಿಯ ವ್ಯಕ್ತಿ ಎಲ್ಲ ಟಿಕೇಟುಗಳನ್ನು ದ್ವಾರಪಾಲಕನಿಗೆ ನೀಡಿದರು. ಅವನು ಟಿಕೇಟನ್ನು ಎಣಿಸದೆ ಎಲ್ಲ ಮಕ್ಕಳನ್ನು

ಹೊರಬಿಟ್ಟನು. ಹೊರಗೆ ಬಂದು ಹುಡುಗರ ಎಣಿಕೆ ಮಾಡಿದಾಗ ಒಬ್ಬ ಹೆಚ್ಚಿರುವುದು ಕಂಡು ಬಂತು. ಆ ಹಿರಿಯ ವ್ಯಕ್ತಿ ನಮ್ಮ ಮನೆಗೆ ಬಂದು ವಿಷಯವನ್ನೆಲ್ಲಾ ತಿಳಿಸಿ ಹನ್ನೆರಡಾಣೆಯನ್ನು ನನ್ನ ಕೈಗೊಪ್ಪಿಸಿ ಹೋದರು. ಆದರೆ ನಮ್ಮ ಹುಡುಗ ಕಾನ್ಪುರದಿಂದ ಲಕ್ನೋದ ತನಕ ಪ್ರಯಾಣ ಮಾಡಿ ಬಂದಿರುವಾಗ ಅದಕ್ಕೆ ತಗಲುವ ಹನ್ನೆರಡಾಣೆಯ ಟಿಕೇಟು ದರವನ್ನು ಪಾವತಿ ಮಾಡಲೇ ಬೇಕಾಗಿದೆ. ಅದನ್ನು ಹೇಗೆ ಪಾವತಿ ಮಾಡುವುದೆಂದು ನಾನು ಆಲೋಚಿಸಿದೆ. ಮನಿಆರ್ಡರ್ ಮಾಡುವುದು ಇತ್ಯಾದಿ ಅಷ್ಟು ಸರಿ ಎನಿಸಲಾರದು. ಕೊನೆಗೆ ನಾನು ಹನ್ನೆರಡಾಣೆಯ ಟಿಕೇಟು ಪಡೆದು ಅದನ್ನು ಹರಿದು ಹಾಕುವುದೆಂದು ತೀರ್ಮಾನಿಸಿದೆ. ಹೀಗೆ ಹಣ ರೈಲ್ವೇ ಸಂಸ್ಥೆಗೆ ತಲಪಿದಂತಾಗುತ್ತದೆ ಮತ್ತು ನಾನು ಹೊಣೆಗಾರಿಕೆಯಿಂದ ಮುಕ್ತನಾಗುತ್ತೇನೆ."

"ನೀವು ಆ ಹನ್ನೆರಡಾಣೆಯನ್ನು ಕೊಡದೇ ಇರುತ್ತಿದ್ದರೆ ಆ ರೈಲಿನವರು ನಿಮ್ಮನ್ನು ಏನು ಮಾಡುತ್ತಿದ್ದರು?" ನಾನು ಪ್ರಶ್ನೆ ಹಾಕಿದೆ.

ಅವರು ಹೇಳಿದರು, "ಮಾಡುವುದೇನು? ಅದರಿಂದ ಅಮಾನತ್ತಿನಲ್ಲಿ ವಂಚನೆ ಮಾಡಿದಂತಾಗುತ್ತದೆ. ವಂಚಿಸುವವರನ್ನು ದೇವನು ಮೆಚ್ಚಲಾರನು, ಮತ್ತು ದೇವನ ಸಂಪ್ರೀತಿ ಇಲ್ಲದಿದ್ದರೆ ಅವನ ಗತಿ ಏನು ಎಂದು ನಿಮಗೆ ತಿಳಿದಿದೆ ತಾನೆ?"

ಆ ಸದ್ವ್ಯಕ್ತಿಯ ಮಾತು ಕೇಳಿ ನನಗೆ ಬಹಳ ಸಂತೋಷವಾಯಿತು. ನನ್ನ ವಿಶ್ವಾಸ ಅದರಿಂದ ಬಲಗೊಂಡಿತು. ಎಂತಹ ಪ್ರಾಮಾಣಿಕ ಜನ ಅವರು! ಈ ಘಟನೆಗೆ ಬಹಳ ದಿನಗಳಾದವು. ಆದರೆ ಇಂದಿಗೂ ಆ ವ್ಯಕ್ತಿಯನ್ನು ನಾನು ಮರೆತಿಲ್ಲ. ಅವರು ಇನ್ನೂ ಜೀವಿಸಿದ್ದರೆ ಸದಾ ಸುಖವಾಗಿರಲಿ, ಅಥವಾ ಮರಣ ಹೊಂದಿದ್ದರೆ ದೇವನಕೃಪೆ ಅವರ ಮೇಲಿರಲಿ ಎಂಬುದೇ ನನ್ನ ಪ್ರಾರ್ಥನೆ.

❖❖❖

ಅತಿಯಾಸೆ ಗತಿಗೇಡು

ಒಂದೂರಿನಲ್ಲಿ ಒಬ್ಬ ಆನೆ ವ್ಯಾಪಾರಿ ಇದ್ದನು. ಅವನಿಗೆ ಮೂವರು ಪುತ್ರರಿದ್ದರು. ಅವನು ಮರಣ ಹೊಂದುವ ವೇಳೆ ಹದಿನೇಳು ಆನೆಗಳನ್ನು ಬಿಟ್ಟು ಹೋದನು. ಆ ಆನೆಗಳನ್ನು ವಿಂಗಡಿಸುವ ಬಗ್ಗೆ ಅವನು ಈ ರೀತಿ ಉಯಿಲು ಬರೆದಿದ್ದನು- "ದೊಡ್ಡ ಮಗನಿಗೆ ಒಟ್ಟು ಆಸ್ತಿಯ ಅರ್ಧ ಭಾಗ. ಎರಡನೆಯವನಿಗೆ ಮೂರನೆಯ ಒಂದು ಭಾಗ. ಕೊನೆಯವನಿಗೆ ಒಂಭತ್ತನೆಯ ಒಂದು ಭಾಗ. ಆಸ್ತಿಯ ವಿಂಗಡನೆಯಾಗುವ ತನಕ ಈ ಆನೆಗಳನ್ನು ದೊಡ್ಡ ಮಗ ಸಾಕಬೇಕು."


ಉಯಿಲಿನಂತೆ ಆಸ್ತಿಯನ್ನು ವಿಂಗಡಿಸುವ ಸಂದರ್ಭ ಬಂದಾಗ ಒಂದು ಸಮಸ್ಯೆ ಎದುರಾಯಿತು. ಹದಿನೇಳು ಆನೆಗಳನ್ನು ಅರ್ಧ ಭಾಗವಾಗಿ ವಿಂಗಡಿಸುವುದು ಹೇಗೆ? ಅದೇ ರೀತಿ 17 ಆನೆಗಳ $^1/_3$ ಮತ್ತು $^1/_9$ ಭಾಗಗಳನ್ನು ಮಾಡುವುದೂ ಸಾಧ್ಯವಿರಲಿಲ್ಲ.

ಈ ಬಗ್ಗೆ ಬಹಳ ಸಮಾಲೋಚನೆ ನಡೆಯಿತು. ಕೊನೆಗೆ ಈ ಮೂರು ಮಂದಿಯೂ ನ್ಯಾಯಾಧೀಶರ ಬಳಿಗೆ ಹೋಗಿ ತಮ್ಮ ಸಮಸ್ಯೆಯನ್ನು ಮುಂದಿಟ್ಟರು. ಜನರಿಗೆ ಈ ವಿಷಯ ತಿಳಿದಾಗ ನ್ಯಾಯಾಧೀಶರು ಆನೆಯನ್ನು ಯಾವ ರೀತಿ ವಿಂಗಡಿಸುತ್ತಾರೆಂಬ ಕುತೂಹಲ ಉಂಟಾಯಿತು. ಅವರು ಹೆಚ್ಚಿನ ಸಂಖ್ಯೆಯಲ್ಲಿ ಅದನ್ನು ನೋಡಲು ಬಂದು ನೆರೆದರು.

ನ್ಯಾಯಾಧೀಶರು ಮೊದಲು ಮೃತಪಟ್ಟ ವ್ಯಕ್ತಿಯ ಉಯಿಲನ್ನು ಓದಿದರು. ಸ್ವಲ್ಪ ಹೊತ್ತು ಆಲೋಚಿಸಿದ ಬಳಿಕ ಹೊರಗಿನಿಂದ ಒಂದು ಆನೆಯನ್ನು ತರಿಸಿದರು. ಈಗ ಒಟ್ಟು ಹದಿನೆಂಟು ಆನೆಗಳಾದುವು. ನ್ಯಾಯಾಧೀಶರು ಹದಿನೆಂಟು ಆನೆಗಳ ಪೈಕಿ ಅರ್ಧ ಭಾಗ ಅಂದರೆ ಒಂಭತ್ತು ಆನೆಗಳನ್ನು ದೊಡ್ಡ ಮಗನಿಗೆ ನೀಡಿದರು. ಅನಂತರ ಹದಿನೆಂಟರ $^1/_3$ ಭಾಗವಾದ 6 ಆನೆಗಳನ್ನು ಎರಡನೆಯ ಮಗನಿಗೆ ನೀಡಿದರು. ಅತ್ಯಂತ ಕಿರಿಯ ಪುತ್ರನಿಗೆ 18ರ $^1/_9$ ಭಾಗವಾದ ಎರಡು ಆನೆಗಳನ್ನು ನೀಡಿದರು.

ಈಗ ಲೆಕ್ಕ ಮಾಡಿ ನೋಡಿ:

ದೊಡ್ಡ ಮಗನಿಗೆ - 9, ಎರಡನೆಯವನಿಗೆ - 6, ಕಿರಿಯ ಮಗನಿಗೆ - 2, = ಒಟ್ಟು 17 ಆನೆಗಳು.



ಒಟ್ಟು 18 ಆನೆಗಳ ಪೈಕಿ ಎಲ್ಲವೂ ವಿಂಗಡನೆಯಾಗಿ ಒಂದು ಆನೆ ಹೆಚ್ಚು ಉಳಿಯಿತು. ಅದನ್ನು ನ್ಯಾಯಾಧೀಶರು ತರಿಸಿದಲ್ಲಿಗೆ ಮರಳಿಸಿದರು. ನ್ಯಾಯಾಧೀಶರ ಈ ಸಮಯ ಪ್ರಜ್ಞೆಯನ್ನು ಕಂಡು ಎಲ್ಲರೂ ಬೆರಗಾದರು. ಅವರು ನ್ಯಾಯಾಧೀಶರ ಬುದ್ಧಿವಂತಿಕೆಯನ್ನು ಬಹಳ ಕೊಂಡಾಡಿದರು.

ಆದರೆ ದೊಡ್ಡ ಮಗನಿಗೆ ಇದರಿಂದ ಸಮಾಧಾನವಾಗಲಿಲ್ಲ. ಆನೆಯನ್ನು ವಿತರಿಸದೇ ಇರುತ್ತಿದ್ದರೆ ಆ ಎಲ್ಲಾ ಆನೆಗಳು ನನ್ನ ಬಳಿ ಇರುತ್ತಿದ್ದುವು ಎಂದು ಅವನು ಆಲೋಚಿಸುತ್ತಿದ್ದನು. ಅವನು ನ್ಯಾಯಾಧೀಶರು ಮಾಡಿದ ವಿಂಗಡನೆಯನ್ನು ವಿರೋಧಿಸಿದನು. ಆನೆಯನ್ನು ವಿಂಗಡಿಸುವಾಗ ಹೊರಗಿನ ಒಂದು ಆನೆಯನ್ನು ತಂದದ್ದು ತಪ್ಪು ಎಂದು ಅವನು ವಾದಿಸಿದನು.

ದೊಡ್ಡ ಮಗನಲ್ಲಿದ್ದ ದುರಾಸೆಯನ್ನು ನ್ಯಾಯಾಧೀಶರು ಗುರುತಿಸಿದರು. ಅವನು ತನ್ನ ಎಳೆಯ ಸಹೋದರನನ್ನು ವಂಚಿಸ ಬಯಸಿದ್ದನು. ನ್ಯಾಯಾಧೀಶರು ಮತ್ತೊಮ್ಮೆ ಉಯಿಲನ್ನು ತೆಗೆದು ಓದಿದರು. ಅದರಲ್ಲಿ $^1/_2$, $^1/_3$, $^1/_9$ ಭಾಗ ಎಂದು ಸ್ಪಷ್ಟವಾಗಿ ಬರೆಯಲಾಗಿತ್ತು. ನಂತರ ನ್ಯಾಯಾಧೀಶರು ಮರುದಿನ ತೀರ್ಪು ನೀಡುವುದಾಗಿ ಭರವಸೆಯಿತ್ತರು.

ಮಾರನೆಯ ದಿನದ ತೀರ್ಪನ್ನು ನೋಡಲು ಹಿಂದಿಗಿಂತ ಹೆಚ್ಚು ಜನ ಸೇರಿದ್ದರು. ಈಗ ನ್ಯಾಯಾಧೀಶರು ಹೇಗೆ ತೀರ್ಪು ನೀಡುವರೆಂದು ನೋಡಲು ಜನ

ಉತ್ಸಾಹದಿಂದ ಪಾಲ್ಗೊಂಡಿದ್ದರು. ಮರುದಿನ ನ್ಯಾಯಾಧೀಶರು ಎಲ್ಲ ಆನೆಗಳನ್ನು ಒಂದು ಸೇತುವೆಯ ಬಳಿಗೆ ತರಲು ಹೇಳಿದರು. ಇಂದಿನ ತೀರ್ಪು ನಿರ್ಣಾಯಕವಾಗಿರುವುದು ಎಂಬ ವಿಷಯದಲ್ಲಿ ಮೂವರು ಸಹೋದರರಿಂದ ಅವರು ಪ್ರಮಾಣವನ್ನು ಪಡೆದರು.

ಅನಂತರ ಅವರು ಒಂದು ಆನೆಯನ್ನು ಸೇತುವೆಯ ಮೇಲೆ ಮತ್ತು ಎರಡು ಆನೆಗಳನ್ನು ಕೆಳಗೆ ನಿಲ್ಲಿಸಿದರು. ಇದು 1 ಭಾಗವನ್ನು ಸೂಚಿಸುತ್ತದೆ. ಹೀಗೆ ಒಟ್ಟು ಮೂರು ಆನೆಗಳು ದೊಡ್ಡ ಮಗನ ವಶಕ್ಕೆ ಬಂದವು. ಅನಂತರ ನ್ಯಾಯಾಧೀಶರು ಒಂದು ಆನೆಯನ್ನು ಸೇತುವೆ ಮೇಲೆ ಮತ್ತು ಮೂರನ್ನು ಕೆಳಗೆ ನಿಲ್ಲಿಸಿದರು. ಹೀಗೆ ಈ ನಾಲ್ಕು ಆನೆಗಳು ಎರಡನೆಯ ಮಗನಿಗೆ ಸಿಕ್ಕಿತು. ಕೊನೆಯದಾಗಿ ನ್ಯಾಯಾಧೀಶರು ಒಂದು ಆನೆಯನ್ನು ಸೇತುವೆಯ ಮೇಲೆ ಮತ್ತು ಒಂಭತ್ತನ್ನು ಕೆಳಗೆ ನಿಲ್ಲಿಸಿದರು. ಆ 10 ಆನೆಗಳನ್ನು ಕಿರಿಯ ಮಗನಿಗೆ ನೀಡಿದರು.

ಒಟ್ಟು ಹದಿನೇಳು ಆನೆಗಳು ಈ ಕೆಳಗಿನಂತೆ ವಿಂಗಡನೆಯಾದವು:

ದೊಡ್ಡ ಮಗನಿಗೆ - 3, ಎರಡನೆಯ ಮಗನಿಗೆ- 4, ಕಿರಿಯ ಮಗನಿಗೆ - 10,

= ಒಟ್ಟು - 17 ಆನೆಗಳು.

ನ್ಯಾಯಾಧೀಶರ ಈ ಅಪರೂಪದ ತೀರ್ಪನ್ನು ಕಂಡು ಜನರು ಮೂಗಿನ ಮೇಲೆ ಬೆರಳಿಟ್ಟರು.

❖❖❖

ಕಳ್ಳನ ಮಗ



ಒಮ್ಮೆ ಒಬ್ಬ ವ್ಯಕ್ತಿ ಹಣ್ಣುಗಳನ್ನು ಕದಿಯಲು ಒಂದು ತೋಟಕ್ಕೆ ಹೊಕ್ಕನು. ಜೊತೆಯಲ್ಲಿ ತನ್ನ ಸಹಾಯಕ್ಕೆಂದು ಅವನು ತನ್ನ ಮಗನನ್ನೂ ಕರೆದೊಯ್ದಿದ್ದನು. ಅವನು ಮಗನನ್ನು ಬದಿಯಲ್ಲಿ ನಿಲ್ಲಿಸಿ ಯಾರಾದರೂ ನೋಡಿದರೆ ಹೇಳಬೇಕೆಂದು ತಾಕೀತು ಮಾಡಿ ತೋಟದ ಬೇಲಿಯನ್ನು ದಾಟಿದನು.

ಸ್ವಲ್ಪ ಹೊತ್ತಿನಲ್ಲೇ "ಅವನು ನೋಡುತ್ತಿದ್ದಾನೆ" ಎಂದು ಮಗ ಬೊಬ್ಬಿಡಲು ಶುರು ಮಾಡಿದನು. ಇದನ್ನು ಕೇಳಿ ಆ ವ್ಯಕ್ತಿ ಭಯಭೀತನಾಗಿ ಆತುರದಿಂದ ತನ್ನ ಮಗನ ಬಳಿ ಬಂದು "ಯಾರು ನೋಡುತ್ತಿದ್ದಾನೆ?" ಎಂದು ಕೇಳಿದನು.

"ನಮ್ಮನ್ನೂ ನಮ್ಮೆಲ್ಲರನ್ನೂ ಆ ಅಲ್ಲಾಹನು ನೋಡುತ್ತಿದ್ದಾನೆ" ಮಗನ ಈ ಉತ್ತರದಿಂದ ಅವನು ನಾಚಿ ನೀರಾದನು. ಕೂಡಲೇ ಅವನು ಕಳ್ಳತನಕ್ಕಾಗಿ ಪಶ್ಚಾತ್ತಾಪ ಪಟ್ಟು ಅಲ್ಲಿಂದ ಬರಿಗೈಯಲ್ಲಿ ಮರಳಿದನು.

ಕುಸ್ತಿಪಟು ಸೋತದ್ದೇಕೆ?

ಒಂದೂರಿನಲ್ಲಿ ಒಬ್ಬ ಕುಸ್ತಿಪಟು ವಾಸವಾಗಿದ್ದನು. ಅವನು ಬಹಳ ಹೆಸರುವಾಸಿಯಾಗಿದ್ದನು. ಅವನ ಜನಪ್ರಿಯತೆಯನ್ನು ಗಮನಿಸಿದ ಊರಿನ ಅರಸನು ಅವನನ್ನು ಆಸ್ಥಾನಕ್ಕೆ ಕರೆಸಿ ಬಿರುದು ಬಹುಮಾನಗಳನ್ನು ನೀಡಿ ತನ್ನ ಆಸ್ಥಾನಿಕರಲ್ಲಿ ಸೇರಿಸಿಕೊಂಡನು. ಯಾರು ಈ ಕುಸ್ತಿಪಟುವನ್ನು ಸೋಲಿಸುತ್ತಾರೋ ಅವರಿಗೆ ಒಂದು ಲಕ್ಷ ರೂಪಾಯಿ ಬಹುಮಾನ ನೀಡಲಾಗುವುದು ಎಂದು ಘೋಷಿಸಿದನು. ಇಷ್ಟು ದೊಡ್ಡ ಮೊತ್ತದ ಬಹುಮಾನ ಗಿಟ್ಟಿಸುವ ಆಸೆಯಿಂದ ಅನೇಕರು ಬಂದು ಸೋತು ಸಪ್ಪೆ ಮೋರೆ ಹಾಕಿಕೊಂಡು ಹೋಗಿದ್ದರು.

ಒಂದು ದಿನ ರಾಜನ ಆಸ್ಥಾನಕ್ಕೆ ಒಬ್ಬ ತೆಳ್ಳಗಿನ ವ್ಯಕ್ತಿ ಬಂದು ನಾನು ಕುಸ್ತಿಪಟುವನ್ನು ಸೋಲಿಸುತ್ತೇನೆ ಎಂದು ಹೇಳಿದನು. ಅವನನ್ನು ನೋಡಿ ಎಲ್ಲರೂ ನಕ್ಕು ಬಿಟ್ಟರು. ಈ ಸಣಕಲು ಮೂರ್ತಿ ಕುಸ್ತಿಯಾಡಲು ಸಾಧ್ಯವೇ ಎಂದು ಎಲ್ಲರೂ ಅವನನ್ನು ದಿಟ್ಟಿಸುತ್ತಿದ್ದರು.

ರಾಜನು ಅವನೊಡನೆ, "ನೀನು ನಮ್ಮ ಆಸ್ಥಾನದ ಕುಸ್ತಿಪಟುವನ್ನು ನೋಡಿದ್ದೀಯಾ?" ಎಂದು ಪ್ರಶ್ನಿಸಿದನು.

ಅದಕ್ಕೆ ಅವನು ಉತ್ತರಿಸಿದನು, "ನಾನು ಅವನನ್ನು ನೋಡಿಲ್ಲ. ಆದರೆ ಎಂತಹ ಶಕ್ತಿಶಾಲಿಗಳನ್ನೂ ಮಣಿಸುವ ಕುಸ್ತಿಯ ಯುಕ್ತಿಗಳು ನನಗೆ ತಿಳಿದಿವೆ. ನಿಮ್ಮ ಕುಸ್ತಿಪಟುವನ್ನು ಕರೆಸಿ ನೋಡಿ."

ಕೊನೆಗೆ ಆಸ್ಥಾನದ ಕುಸ್ತಿಪಟುವನ್ನು ಕರೆಸಲಾಯಿತು. ಸಣಕಲು ವ್ಯಕ್ತಿಯೊಬ್ಬ ತನಗೆ ಪ್ರತಿಸ್ಪರ್ಧಿಯಾಗಿ ನಿಂತಿರುವುದನ್ನು ಕಂಡು ಅವನು ಹೇಳಿದನು, "ಈ ದುರ್ಬಲನೊಂದಿಗೆ ಸೆಣಸಾಡುವುದು ನನಗೆ ಅವಮಾನ. ನಾನಂತೂ ಇವನೊಂದಿಗೆ ಕಾಳಗಕ್ಕೆ ಇಳಿಯಲಾರೆ."

ಆಗ ಸಣಕಲು ವ್ಯಕ್ತಿ ಹೇಳಿದನು, "ಕಾದಾಡಲು ಸಿದ್ಧವಿಲ್ಲ ಎಂದರೆ ಹಾಗೆಯೇ ಸೋಲೊಪ್ಪಿಕೊಳ್ಳಲಿ. ನನಗೆ ಒಂದು ಲಕ್ಷ ರೂಪಾಯಿ ಬಹುಮಾನ ಸಿಕ್ಕಂತಾಗುತ್ತದೆ."

"ಹಾಗಾದರೆ ಒಂದು ಲಕ್ಷ ರೂಪಾಯಿಗಾಗಿ ನೀನು ನಿನ್ನ ಪ್ರಾಣವನ್ನು ಕಳೆದುಕೊಳ್ಳಲು ಸಿದ್ಧವಿರುವೆಯಾ?" ಆಸ್ಥಾನದ ಕುಸ್ತಿಪಟು ಪ್ರಶ್ನಿಸಿದನು.

"ಪ್ರಾಣ ಯಾರದು ಹೋಗುತ್ತದೆಂದು ಅಖಾಡದಲ್ಲಿಳಿದು ನೋಡ ಬೇಕಾಗುತ್ತದೆ. ಮೊದಲು ಹೋರಾಟಕ್ಕೆ ಅಣಿಯಾಗು, ಯಾಕೆ ನುಣುಚಿ ಕೊಳ್ಳುತ್ತಿರುವೆ?" ಸಣಕಲು ವ್ಯಕ್ತಿ ನಾಟುವಂತೆ ಹೇಳಿದನು.

ಆಸ್ಥಾನದ ಕುಸ್ತಿಪಟುವಿಗೆ ಸಿಟ್ಟು ಬಂತು. ಕುಸ್ತಿ ಏರ್ಪಡಿಸಲು ರಾಜಾಜ್ಞೆಯೂ ಆಯಿತು. ಇಬ್ಬರೂ ಟೊಂಕ ಕಟ್ಟಿ ಅಖಾಡಕ್ಕೆ ಇಳಿದರು. ಮೊದಲು ಇಬ್ಬರೂ ಹಸ್ತಲಾಘವ ಮಾಡಿಕೊಂಡರು. ಅಷ್ಟು ಹೊತ್ತಿಗೆ ಸಣಕಲು ವ್ಯಕ್ತಿ ಮೆಲ್ಲನೆ ಕುಸ್ತಿಪಟುವಿನ ಕಿವಿಯಲ್ಲಿ ಹೀಗೆ ಉಸುರಿದನು, "ನಾನು ದೂರದ ಕಾಡಿನ ನಿವಾಸಿ. ಅಲ್ಲಿ ಅನೇಕರು ಹೊಟ್ಟೆಗೆ ಹಿಟ್ಟಿಲ್ಲದೆ ಕಂಗಾಲಾಗಿದ್ದಾರೆ, ಸಣ್ಣ ಸಣ್ಣ ಮಕ್ಕಳು ಹಸಿವೆಯಿಂದ ನರಳುತ್ತಿದ್ದಾರೆ. ನೀನು ಈ ಕಾಳಗದಲ್ಲಿ ಸೋತರೆ ನನಗೆ ಒಂದು ಲಕ್ಷ ರೂಪಾಯಿ ಸಿಕ್ಕಂತಾಗುತ್ತದೆ. ಅದರಿಂದ ಹಸಿದವರಿಗೆ ಉಣ್ಣಿಸಬಹುದು. ದೇವನು ನಿನ್ನ ಈ ತ್ಯಾಗದಿಂದ ಬಹಳ ಸಂತುಷ್ಟನಾಗುವನು."

ಇದನ್ನು ಕೇಳಿದ ಆಸ್ಥಾನದ ಕುಸ್ತಿಪಟುವಿಗೆ ಅತ್ಯಾಶ್ಚರ್ಯವಾಯಿತು. ಅವನು ಹೇಳಿದನು, "ನೀನು ಹೇಳಿದಂತೆಯೇ ಆಗಲಿ, ನಾನು ಸುಮ್ಮನೆ ಹೋರಾಡುವಂತೆ ನಟಿಸುತ್ತಿರುತ್ತೇನೆ. ನೀನು ನನ್ನ ಮೇಲೆ ಆಕ್ರಮಣ ಮಾಡುವಂತೆ ನಟಿಸು, ಕೊನೆಗೆ ನಾನು ಸೋಲುತ್ತೇನೆ."

ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಆ ಆಸ್ಥಾನದ ಕುಸ್ತಿಪಟು ಎಂತಹ ಅವಮರ್ಯಾದೆಗೂ ಸಿದ್ಧವಾಗಿ ನಿಂತನು.

ಇಬ್ಬರ ನಡುವೆ ಕಾಳಗ ನಡೆಯಿತು. ಇಬ್ಬರೂ ಶಕ್ತಿಮೀರಿ ಹೋರಾಡುತ್ತಿರುವವರಂತೆ ಕಂಡು ಬಂದರು. ಕೊನೆಗೂ ಆಸ್ಥಾನದ ಕುಸ್ತಿಪಟು ಬಿದ್ದು ಬಿಟ್ಟನು. ಸಣಕಲು ಮೂರ್ತಿ ಅವನ ಮೇಲೆ ಕುಳಿತಿದ್ದನು.

ನಾಲ್ಕೂ ದಿಸೆಯಿಂದ "ಭೇಷ್!ಭೇಷ್!!" ಎಂಬ ಘೋಷಣೆ ಮೊಳಗಿತು. ಸಣಕಲು ಮಲ್ಲನಿಗೆ ಬಿರುದು ಬಾವಲಿಗಳನ್ನು ನೀಡಿ ಸತ್ಕರಿಸಿ ಕಳುಹಿಸಲಾಯಿತು. ಆಸ್ಥಾನದ ಕುಸ್ತಿಪಟುವನ್ನು ಆ ದಿನ ಎಲ್ಲರೂ ತಾತ್ಸಾರದಿಂದ ಬೊಟ್ಟು ಮಾಡಿ ತೋರಿಸತೊಡಗಿದರು. ಎಲ್ಲಾ ಮೂದಲಿಕೆಯ ಮಾತುಗಳನ್ನು ಕೇಳುತ್ತಾ ಅವನು ಮನೆ ಸೇರಿದನು. ಮನೆಯವರೂ ಅವನನ್ನು ಅಣಕಿಸಿದರು. ಆದರೆ ದೇವನ ಸಂಪ್ರೀತಿ ಗಳಿಸಲು ಆ ಕುಸ್ತಿಪಟು ಎಂತಹ ಅವಮಾನವನ್ನು ಸಹಿಸಲೂ ಸಿದ್ಧ ಎಂದು ಶಪಥ ಹಾಕಿದ್ದನು.

ದಿನ ಕಳೆದು ಕತ್ತಲು ಆವರಿಸಿತು. ಕುಸ್ತಿಪಟು ಆಲೋಚನಾ ಮಗ್ನನಾದನು, ಅಲ್ಲಾಹನ ಸಂಪ್ರೀತಿ ಗಳಿಸಲು ನಾನು ಇಷ್ಟನ್ನೆಲ್ಲಾ ಸಹಿಸಿರುವಾಗ ನನ್ನ ಜೀವನವನ್ನೇ ಆ ಉದ್ದೇಶಕ್ಕಾಗಿ ಮುಡಿಪಾಗಿಡುವುದು ಯುಕ್ತವಲ್ಲವೇ? ಎಂದು ಅವನು ಭಾವಿಸಿದನು.

ಮರುದಿನ ಒಬ್ಬ ವಿದ್ವಾಂಸರ ಬಳಿ ತೆರಳಿ ತನ್ನ ಸಂಪತ್ತನ್ನೆಲ್ಲಾ ನೀಡಿ ತನಗೆ ಕುರ್‌ಆನಿನ ಪಾಠ ಕಲಿಸಿಕೊಡುವಂತೆ ಹೇಳಿದನು. ವಿದ್ವಾಂಸರು ಹಣವನ್ನು ದಾನ ಮಾಡಲು ಹೇಳಿ ಪಾಠ ಹೇಳಿ ಕೊಡಲು ಮುಂದಾದರು. ಅಂದಿನಿಂದ ಅವನು ಜ್ಞಾನದ ಬೆನ್ನು ಹತ್ತಿದನು. ಸ್ವಲ್ಪ ಕಾಲದಲ್ಲೇ ಅವನು ದೊಡ್ಡ ವಿದ್ವಾಂಸನಾಗಿ ಖ್ಯಾತನಾದನು.

ಇದು ಯಾರ ಕಥೆಯೆಂದು ಗೊತ್ತೇ? ನಾವು ಇಂದಿಗೂ ಗೌರವದಿಂದ ಸ್ಮರಿಸುವ ಹ. ಜುನೈದ್ ಬಗ್ದಾದಿಯವರ(ರ) ಜೀವನ ಕಥನ.

❖❖❖

ತಾತ ಹೇಳಿದ ಕಥೆ

ರಹೀಮ್ ಬಾಬಾ ಊರನ್ನು ಪ್ರವೇಶಿಸುತ್ತಲೇ ಮಕ್ಕಳು ಅವರ ಸುತ್ತ ಗುಂಪುಗೂಡಿದರು. ತಮ್ಮ ಆಟೋಟಗಳನ್ನು ಬಿಟ್ಟು ಅವರತ್ತ ಧಾವಿಸಿದರು. ಹೊಲದಲ್ಲಿ ಕೆಲಸ ಮಾಡುತ್ತಿದ್ದ ರೈತರು, ಅವರು ಬರುತ್ತಿರುವುದನ್ನು ಕಂಡು ಮುಗುಳ್ನಕ್ಕರು. ರಹೀಮ್ ಬಾಬಾ ತಮ್ಮ ಊರುಗೋಲನ್ನು ಹಿಡಿದು ಮೆಲ್ಲಮೆಲ್ಲನೆ ನಡೆಯುತ್ತಿದ್ದರು. ಆಮಿರ್ ಅವರ ಕೈಯನ್ನು ಹಿಡಿದುಕೊಂಡನು. ಮಕ್ಕಳೆಲ್ಲಾ ನಕ್ಕು ನಲಿದು ಚೌಧರಿ ಸಾಹೇಬರ ಚಾವಡಿಯ ತನಕ ಬಂದರು.

ಈ ಚಾವಡಿಯಲ್ಲಿ ಕುಳಿತು ರಹೀಮ್ ಬಾಬಾ ಕಥೆಗಳನ್ನು ಹೇಳುತ್ತಿದ್ದರು. ಕೆಲವೊಮ್ಮೆ ಬಾಬಾ ಮಕ್ಕಳಿಗಾಗಿ ಸಿಹಿತಿಂಡಿ ತರುತ್ತಿದ್ದರು. ಆದರೆ ಅದಕ್ಕಿಂತ ಅವರ ಕಥೆಗಳೇ ಮಕ್ಕಳಿಗೆ ಅಚ್ಚುಮೆಚ್ಚು.

ಚೌಧರಿ ಸಾಹೇಬರ ಚಾವಡಿಯ ಬಳಿ ಬಂದ ಬಳಿಕ ರಹೀಮ್ ಬಾಬಾ ತಮ್ಮ ಊರುಗೋಲನ್ನು ಒಂದು ಬದಿಯಲ್ಲಿಟ್ಟು ಕುಳಿತರು. ಮಕ್ಕಳು ಅವರನ್ನು ಸುತ್ತುವರಿದರು.

"ತಾತಾ! ತಾತ ಈ ದಿನ ಒಳ್ಳೆಯ ಕಥೆ ಹೇಳಬೇಕು" ಶಾಹಿದ್ ಪಕ್ಕಕ್ಕೆ ಸರಿದು ಹೇಳಿದನು.

ಬಾಬಾ ನಗು ಮುಖ ಬೀರಿ, "ಒಳ್ಳೆಯ ಕಥೇನಾ! ಹಾಗಾದರೆ ಕೇಳಿ" ಎಂದು ಹೇಳಲಾರಂಭಿಸಿದರು.

ತಂದೆ ತಾಯಿಗಳ ಮುದ್ದಿನಲ್ಲಿ ಬೆಳೆದ ಒಬ್ಬ ಹುಡುಗನಿದ್ದನು. ಅವರ ಮನೆ ಬಹಳ ದೊಡ್ಡದು. ತಾಯಿ ಅವನನ್ನು ಬಹಳ ಪ್ರೀತಿಯಿಂದ ಆರೈಕೆ ಮಾಡುತ್ತಿದ್ದಳು. ಆದರೆ ಅವನು ತಾಯಿಯ ಮಾತನ್ನು ಕೇಳುತ್ತಿರಲಿಲ್ಲ. ಓದು ಬರಹದಲ್ಲಿ ಅವನಿಗೆ ಆಸಕ್ತಿಯೇ ಇರಲಿಲ್ಲ. ಶಾಲೆಯಿಂದ ತಪ್ಪಿಸಿಕೊಂಡು ಬಂದು ಇಡೀ ದಿನ ಆಟವಾಡುವುದು ಅವನ ಅಭ್ಯಾಸ.

ಆಟದಲ್ಲೂ ಒಳ್ಳೆಯ ಹುಡುಗರು ಆಡುವಂತಹ ಆಟ ಆಡುತ್ತಿರಲಿಲ್ಲ. ಮನೆಯಲ್ಲಿನ ಪ್ರಾಣಿಗಳನ್ನು ಸಿಕ್ಕಾಬಟ್ಟೆ ಹಿಂಸಿಸುತ್ತಿದ್ದನು. ಕೋಳಿಯನ್ನು ಹಿಡಿದು ತಲೆಕೆಳಗಾಗಿ ತೂಗು ಹಾಕುವುದು, ಅದು ರೆಕ್ಕೆ ಬಡಿಯುವುದನ್ನು ನೋಡಿ ಸಂತೋಷ

ಪಡುವುದು, ತಾಯಿ ಗದರಿಸಿದರೆ ಕೋಳಿಯನ್ನು ಬಿಟ್ಟು ಇಲಿಗೂಡು ತೆಗೆದುಕೊಂಡು ಆ ಮೂಲಕ ಇಲಿ ಹಿಡಿಯಲು ಹೋಗುವುದು, ಎಲ್ಲಾದರೂ ಇಲಿ ಸಿಕ್ಕಿ ಬಿದ್ದರೆ ಅದನ್ನು ಹೊರಗಡೆ ಕೊಂಡು ಹೋಗಿ ಕಲ್ಲು ಮತ್ತು ಇಟ್ಟಿಗೆಗಳಿಂದ ಹೊಡೆದು ಸಾಯಿಸುವುದು.

ಮಗನ ಈ ಕೃತ್ಯವನ್ನು ಕಂಡು ತಾಯಿ ಬೇಸತ್ತಿದ್ದಳು. ಉಬ್ಬಸ ರೋಗಿಯಾದ ತಂದೆ ಕೆಮ್ಮುತ್ತಾ ಒಳಗೊಳಗೇ ಕುದಿಯುತ್ತಿದ್ದರು.

ಒಂದು ದಿನ ಅವನು ರಾದ್ಧಾಂತವನ್ನೇ ಮಾಡಿ ಬಿಟ್ಟನು. ನೆಲದಲ್ಲಿ ಸ್ವಲ್ಪ ಧಾನ್ಯಗಳನ್ನು ಹಾಕಿದನು. ಅಲ್ಲೇ ಒಂದು ಗೆರಸೆಯನ್ನು ನಿಲ್ಲಿಸಿ ಅದಕ್ಕೆ ನೂಲು ಕಟ್ಟಿ ಕೈಯಲ್ಲಿ ಹಿಡಿದುಕೊಂಡು ದೂರದಲ್ಲಿ ಕುಳಿತನು. ಧಾನ್ಯಗಳನ್ನು ತಿನ್ನಲು ಹಕ್ಕಿಗಳು ಗೆರಸೆಯ ಬಳಿಗೆ ಬಂದವು. ಸಂತೋಷದಿಂದ ಕುಪ್ಪಳಿಸಿ ಧಾನ್ಯಗಳನ್ನು ತಿನ್ನತೊಡಗಿದವು. ಅಷ್ಟು ಹೊತ್ತಿಗೆ ಅವನು ನೂಲನ್ನು ಎಳೆದನು. ಗೆರಸೆ ಬಿದ್ದು ಬಿಟ್ಟಿತು. ಹಕ್ಕಿಗಳೆಲ್ಲಾ ಪುರ್ರೆಂದು ಹಾರಿ ಹೋದವು. ಆದರೆ ಒಂದು ನತದೃಷ್ಟ ಹಕ್ಕಿ ಮಾತ್ರ ಗೆರಸೆಯಡಿ ಸಿಕ್ಕಿ ಹಾಕಿಕೊಂಡಿತು. ಅದನ್ನು ಕಂಡು ಹುಡುಗನಿಗೆ ಬಹಳ ಸಂತೋಷವಾಯಿತು.

ಅವನು ಹಕ್ಕಿಯ ಕಾಲಿಗೆ ದಾರ ಬಿಗಿದನು. ಗಾಳಿಪಟದಂತೆ ಅದನ್ನು ಹಾರಿಸಿಬಿಟ್ಟನು. ಬಡಪಾಯಿ ಹಕ್ಕಿ ದಾರದ ಭಾರದಿಂದಾಗಿ ಹಾರುವಷ್ಟು ಹಾರಲಾರದೆ ರೆಕ್ಕೆ ಬಡಿಯತೊಡಗಿತು. ಹುಡುಗ ತನ್ನ ಆಟವನ್ನು ಮುಂದುವರಿಸಿದಂತೆ ಹಕ್ಕಿ ಅರೆ ಜೀವವಾಯಿತು. ಒಮ್ಮೆ ಅವನು ದಾರವನ್ನು ಜೋರಾಗಿ ಎಳೆದಾಗ ಹಕ್ಕಿಯ ಕೋಮಲ ಕಾಲು ಮುರಿದು ದಾರದ ಜೊತೆಗೇ ಬಂತು. ಹಕ್ಕಿ ನೆಲದ ಮೇಲೆ ಬಿದ್ದು ವಿಲವಿಲನೆ ಒದ್ದಾಡ ತೊಡಗಿತು.

"ಅಯ್ಯೋ ಪಾಪ" ಪುಟ್ಟ ಝ್ಯುಬಾ ಉದ್ಗರಿಸಿದಳು.

"ಮತ್ತೇನಾಯಿತು ತಾತಾ?" ಆಮಿರ್ ಕೇಳಿದನು.

"ಮತ್ತೇನಾಗುವುದು, ಹಕ್ಕಿಯೊಡನೆ ಆಟ ಆಡಿದ್ದು ಸಾರ್ಥಕವಾಯಿತು ಎನಿಸಿತು ಆ ಹುಡುಗನಿಗೆ" ರಹೀಮ್ ಬಾಬಾ ಗದ್ಗರಿತರಾಗಿ ಹೇಳಿದರು.

ಅವನು ಒದ್ದಾಡುತ್ತಿದ್ದ ಹಕ್ಕಿಯನ್ನು ಹಾಗೇ ಬಿಟ್ಟು ಹೊರಟು ಹೋದನು. ಅವನ ತಾಯಿ ಬಂದು ಹಕ್ಕಿಯನ್ನು ಈ ಸ್ಥಿತಿಯಲ್ಲಿ ನೋಡಿ ಮರುಗಿದಳು. ಹಕ್ಕಿಯ ಗಾಯಕ್ಕೆ ಔಷಧ ಹಚ್ಚಿ "ದೇವಾ!ದೇವಾ ನನ್ನ ಮಗನನ್ನು ಸರಿದಾರಿಗೆ ತಾ" ಎಂದು ಪ್ರಾರ್ಥಿಸಿದಳು.

ಹೀಗೆಯೇ ಕಾಲ ಕಳೆಯುತ್ತಿತ್ತು. ಹುಡುಗ ಬೆಳೆದು ದೊಡ್ಡವನಾದನು. ಅವನು ಸೈನ್ಯಕ್ಕೆ ಸೇರಿದನು. ಅದೇ ಸಂದರ್ಭದಲ್ಲಿ ಯುದ್ಧ ಆರಂಭಗೊಂಡಿತು. ಸೇನಾ



ತುಕಡಿಯ ಜೊತೆ ಸೇರಿ ಅವನೂ ಯುದ್ಧ ರಂಗಕ್ಕೆ ಹೋದನು. ಘೋರ ಯುದ್ಧ ಸಾಗಿತ್ತು. ಆ ಹುಡುಗನೂ ಶತ್ರುಗಳೊಂದಿಗೆ ಸೆಣಸಾಡುತ್ತಿದ್ದನು. ಗುಂಡುಗಳ ಸದ್ದು ಕೇಳುತ್ತಿತ್ತು. ದಟ್ಟವಾಗಿ ಹಬ್ಬಿದ ಹೊಗೆಯಿಂದಾಗಿ ಹತ್ತಿರದ ವಸ್ತುವೂ ಕಾಣಿಸುತ್ತಿರಲಿಲ್ಲ. ಇದ್ದಕ್ಕಿದ್ದಂತೆಯೇ ಅವನ ಕಾಲಿನಲ್ಲಿ ಯಾರೋ ಬೆಂಕಿ ಉರಿಸಿದಂತೆ ಭಾಸವಾಯಿತು. ಅವನು ಅಲ್ಲೇ ಸ್ಮೃತಿ ತಪ್ಪಿ ಬಿದ್ದು ಬಿಟ್ಟನು. ಕಣ್ಣು ತೆರೆದಾಗ

ಅವನು ಆಸ್ಪತ್ರೆಯಲ್ಲಿದ್ದನು. ಅವನ ಕಾಲಿಗೆ ಅನೇಕ ಗುಂಡುಗಳು ತಗಲಿದ್ದು ಅದರ ವಿಷ ಹರಡುತ್ತಲೇ ಇದೆ ಎಂದು ಡಾಕ್ಟರ್ ಹೇಳಿದರು. ಕಾಲನ್ನು ಕತ್ತರಿಸದಿದ್ದರೆ ಜೀವಕ್ಕೇ ಅಪಾಯ ತಟ್ಟುವ ಸಂಭವವಿತ್ತು. ಕೊನೆಗೂ ಅವನ ಕಾಲನ್ನು ಕತ್ತರಿಸಲಾಯಿತು.

ಮೊದಲ ಬಾರಿಗೆ ಆ ಹುಡುಗನಿಗೆ ತನ್ನ ಶೋಷಣೆಯ ಅರಿವಾಯಿತು. ಅದೆಷ್ಟೋ ಹಕ್ಕಿಗಳ ಗೂಡನ್ನು ಅವನು ಮುರಿದಿದ್ದನು. ಪ್ರಾಣಿಗಳನ್ನು ಹಿಂಸಿಸಿದ್ದನು. ಅದರ ಪ್ರತಿಫಲವೇ ಅವನಿಗಿಂದು ಸಿಗುತ್ತಿದೆ. ಪ್ರಾಣಿ ಪಕ್ಷಿಗಳೂ ಶಾಪ ನೀಡುತ್ತವೆ ಎನ್ನುತ್ತಾ ರಹೀಮ್ ಬಾಬಾ ಅತ್ತು ಬಿಟ್ಟರು. ಮಕ್ಕಳೆಲ್ಲಾ ಅವರನ್ನೇ ದಿಟ್ಟಿಸಿ ನೋಡುತ್ತಿದ್ದರು. ಅವರು ಮತ್ತೆ ಹೇಳಿದರು:

"ನನ್ನ ಮುದ್ದು ಮಕ್ಕಳೇ! ಆ ಕೆಟ್ಟ ಬಾಲಕ ನಿಮ್ಮ ತಾತನಲ್ಲದೆ ಮತ್ತಾರೂ ಅಲ್ಲ. ಅಲ್ಲಾಹನು ನನಗೆ ತಕ್ಕ ಶಾಸ್ತಿ ಮಾಡಿದನು" ಎನ್ನುತ್ತಾ ಅವರು ತಮ್ಮ ಮುರಿದ ಕಾಲನ್ನು ಎತ್ತಿ ತೋರಿಸಿದರು.

ಮಕ್ಕಳೆಲ್ಲಾ ಅದನ್ನು ಆಶ್ಚರ್ಯ ಚಕಿತರಾಗಿ ನೋಡಿದರು. ಆಮಿರ್ ಮೆಲ್ಲನೆ ತಾತನ ಕಿವಿಯಲ್ಲಿ ಉಸುರಿದನು:

"ತಾತಾ, ನಾನು ಝೀಬಾಳ ಬೆಕ್ಕನ್ನು ಉಪದ್ರವಿಸುವುದಿಲ್ಲ. ನಾನು ಒಳ್ಳೆಯ ಹುಡುಗನಲ್ಲವೇ?"

ಆದರೆ ಆಮಿರ್‌ನ ಧ್ವನಿ ಎಲ್ಲರಿಗೂ ಕೇಳಿಸಿತು. ಮಕ್ಕಳೆಲ್ಲಾ ಗೊಳ್ಳೆಂದು ನಕ್ಕು ಬಿಟ್ಟರು.

❖❖❖

ಗೊಂಬೆಗಳ ರಹಸ್ಯ!

ಒಂದೂರಿನಲ್ಲಿ ಒಬ್ಬ ರಾಜನಿದ್ದನು. ಅವನ ಮಂತ್ರಿ ಬಹಳ ಬುದ್ಧಿವಂತ. ಅವನ ಕಾಲದಲ್ಲಿ ಸಾಮ್ರಾಜ್ಯ ಸಾಕಷ್ಟು ಅಭಿವೃದ್ಧಿ ಹೊಂದಿತ್ತು. ಇದ್ದಕ್ಕಿದ್ದಂತೆ ಆ ಮಂತ್ರಿ ರೋಗಿಯಾಗಿ ಹಾಸಿಗೆ ಹಿಡಿದನು. ಯಾವ ಚಿಕಿತ್ಸೆ ನಡೆಸಿದರೂ ರೋಗ ವಾಸಿಯಾಗಲಿಲ್ಲ. ಇನ್ನು ಇಂತಹ ಮಂತ್ರಿಯನ್ನು ಎಲ್ಲಿಂದ ತರುವುದೆಂದು ರಾಜನು ಚಿಂತಾಮಗ್ನನಾದನು. ಕೊನೆಗೆ ರಾಜನು ಮಂತ್ರಿಯ ಬಳಿಯೇ ಬಂದು ಕೇಳಿದನು, "ನಿಮ್ಮ ನಂತರ ನಾನು ಯಾರನ್ನು ಮಂತ್ರಿಯನ್ನಾಗಿ ಆರಿಸಬೇಕು?"

ಈ ಪ್ರಶ್ನೆಗೆ ಉತ್ತರವಾಗಿ ಮಂತ್ರಿಯು ಮೂರು ಗೊಂಬೆಗಳನ್ನು ರಾಜನಿಗೆ ನೀಡಿದನು. ಆ ಮೂರು ಗೊಂಬೆಗಳು ಎಲ್ಲ ವಿಧದಲ್ಲೂ ಸಮಾನವಾಗಿದ್ದವು. ಗಾತ್ರ ಮತ್ತು ಬಣ್ಣದಲ್ಲೂ ಯಾವುದೇ ವ್ಯತ್ಯಾಸವಿರಲಿಲ್ಲ. ಕೈ ಕಾಲುಗಳು ಒಂದೇ ರೀತಿಯಲ್ಲಿದ್ದುವು. ಯಾವುದರಲ್ಲೂ ಒಂದಿಷ್ಟು ವ್ಯತ್ಯಾಸವೂ ಇರಲಿಲ್ಲ. ತೂಕವೂ ಏಕರೂಪದ್ದಾಗಿತ್ತು.

ಮಂತ್ರಿ ರಾಜನೊಂದಿಗೆ ಹೇಳಿದನು, "ಈ ಮೂರು ಗೊಂಬೆಗಳೂ ಒಂದೇ ರೀತಿಯಿದೆ. ಆದರೆ ಮೂರರಲ್ಲೂ ಪ್ರಮುಖ ವ್ಯತ್ಯಾಸವಿದೆ. ಆ ವ್ಯತ್ಯಾಸವನ್ನು ಗುರುತಿಸುವವರನ್ನು ನೀವು ಮಂತ್ರಿಯನ್ನಾಗಿ ಆಯ್ಕೆ ಮಾಡಿ. ಜೊತೆಗೆ ಈ ಗೊಂಬೆಗಳ ಪೈಕಿ ಯಾವುದಕ್ಕೆ ಮೊದಲನೆಯ ದರ್ಜೆಯಿದೆ, ಯಾವುದಕ್ಕೆ ದ್ವಿತೀಯ ದರ್ಜೆ ಮತ್ತು ಯಾವುದಕ್ಕೆ ತೃತೀಯ ದರ್ಜೆಯಿದೆ ಎಂಬುದನ್ನೂ ವಿಚಾರಿಸಬೇಕು."

ಆ ಮಂತ್ರಿ ನಿಧನ ಹೊಂದಿದ ಬಳಿಕ ರಾಜನು ಗೊಂಬೆಗಳನ್ನು ಎತ್ತರದ ಒಂದು ಸ್ಥಳದಲ್ಲಿರಿಸಿದನು. ಯಾರು ಈ ಗೊಂಬೆಗಳ ಪೈಕಿ ಉತ್ತಮ, ಮಧ್ಯಮ ಮತ್ತು ಅಂತಿಮ ದರ್ಜೆಯವುಗಳನ್ನು ಗುರುತಿಸುತ್ತಾರೋ ಅವರನ್ನು ನಾನು ಮಂತ್ರಿಯನ್ನಾಗಿ ಮಾಡುತ್ತೇನೆ ಎಂದು ಡಂಗುರ ಸಾರಿದನು.

ರಾಜನ ಡಂಗುರ ಕೇಳಿ ಮಂತ್ರಿಯಾಗುವ ಆಸೆಯಿಂದ ಅನೇಕರು ಆಸ್ಥಾನಕ್ಕೆ ಬಂದರು. ಗೊಂಬೆಗಳನ್ನು ತಿರುವಿ ಮುರುವಿ ನೋಡಿದರು. ಯಾವುದೇ ವ್ಯತ್ಯಾಸ ಕಂಡು ಬರದೇ ಇದ್ದಾಗ ತಬ್ಬಿಬ್ಬಾಗಿ ಅಲ್ಲಿಂದ ಹೊರಟು ಹೋದರು.

ಹೀಗೆಯೇ ಅನೇಕ ದಿನಗಳು ಕಳೆದವು. ಗೊಂಬೆಗಳನ್ನು ಗುರುತಿಸಬಲ್ಲ ಯಾವೊಬ್ಬನೂ ಅತ್ತ ಸುಳಿಯಲಿಲ್ಲ. ಒಂದು ದಿನ ಒಬ್ಬ ವ್ಯಕ್ತಿ ಆಸ್ಥಾನಕ್ಕೆ ಬಂದನು. ರಾಜನು ಸಾರಿದ ಡಂಗುರ ಅವನ ಕಿವಿಗೂ ಬಿದ್ದಿತ್ತು. ಅವನು ಗೊಂಬೆಗಳನ್ನು ತೂಗಿ ಅಳೆದು ನೋಡಿದನು. ವ್ಯತ್ಯಾಸ ಕಂಡು ಬರಲಿಲ್ಲ. ಬಹಳ ಸೂಕ್ಷ್ಮವಾಗಿ ಗಮನಿಸಿ ಆಲೋಚಿಸ ತೊಡಗಿದನು. ಅವನ ದೃಷ್ಟಿ ಗೊಂಬೆಯ ಕಿವಿಯ ರಂಧ್ರದ ಮೇಲೆ ಬಿತ್ತು. ಇತರ ಗೊಂಬೆಗಳನ್ನು ತೆಗೆದು ನೋಡಿದರೆ ಅವರ ಕಿವಿಗಳಲ್ಲೂ ರಂಧ್ರಗಳಿದ್ದವು. ಅವನು ಮತ್ತೊಮ್ಮೆ ನಿರಾಶನಾದನು. ಇನ್ನೇನು ಸೋಲೊಪ್ಪಿ ಹೊರಟು ಹೋಗಬೇಕು ಎನ್ನುವಷ್ಟರಲ್ಲಿ ಅವನ ತಲೆಗೊಂದು ಯೋಚನೆ ಹೊಳೆಯಿತು. ಅವನು ಒಂದೊಂದೇ ಗೊಂಬೆಯನ್ನು ತೆಗೆದು ಅದರ ಕಿವಿಯಲ್ಲಿ ಊದಿ ನೋಡಿದನು. ಮೂರನೆಯ ಗೊಂಬೆಯ ಕಿವಿಯಲ್ಲಿ ಊದುತ್ತಲೇ ಅವನು ಸಂತೋಷದಿಂದ ಕುಣಿದಾಡಿದನು. ತಾನು ಈ ಗೊಂಬೆಗಳನ್ನು ಉತ್ತಮ, ಮಧ್ಯಮ ಮತ್ತು ಅಂತಿಮ ಎಂದು ವರ್ಗೀಕರಿಸಬಲ್ಲೆ ಎಂದು ಹೇಳಿದನು. ಈ ವಿಷಯವನ್ನು ಆಸ್ಥಾನಿಕರು ರಾಜನಿಗೆ ಮುಟ್ಟಿಸಿದರು. ಗೊಂಬೆಯ ಸಮೇತ ಆ ವ್ಯಕ್ತಿಯನ್ನು ರಾಜನ ಆಸ್ಥಾನಕ್ಕೆ ಕರೆ ತರಲಾಯಿತು. ಗೊಂಬೆಯನ್ನು ಗುರುತಿಸಬಲ್ಲ ವ್ಯಕ್ತಿಯೊಬ್ಬ ಬಂದಿದ್ದಾನೆ ಎಂದು ತಿಳಿದಾಗ ಅನೇಕರು ಬಂದು ಆಸ್ಥಾನದಲ್ಲಿ ನೆರೆದರು. ರಾಜನು ಅವನೊಂದಿಗೆ ವಿಚಾರಿಸಿದನು,

"ನೀನು ಗೊಂಬೆಯನ್ನು ಗುರುತಿಸಬಲ್ಲೆಯಾ?"

"ಹೌದು! ದೇವನಿಚ್ಛಿಸಿದರೆ ನಾನು ಭಾವಿಸಿದಂತೆಯೇ ಆಗುತ್ತದೆ" ಆ ವ್ಯಕ್ತಿ ಹೇಳಿದನು.


ಈ ಗೊಂಬೆಯ ವಿಶೇಷತೆ ಏನೆಂದು ರಾಜನು ಕೇಳಿದನು.

ಮಹಾರಾಜ! ನಾನು ಇದರ ಕಿವಿಯಲ್ಲಿ ಊದಿದಾಗ ಅದು ಅದರ ಹೊಟ್ಟೆಯನ್ನು ಸೇರಿತು. ಇದರ ಅರ್ಥ ಈ ಗೊಂಬೆ ಗೋಪ್ಯ ವಿಚಾರಗಳನ್ನು ಹೊಟ್ಟೆಯಲ್ಲಿರಿಸಿಕೊಂಡವನಿಗೆ ಸಮಾನವೆಂದಾಯಿತು. ರಹಸ್ಯವನ್ನು ಬಹಿರಂಗಪಡಿಸದೇ ಇರುವುದು ಅತ್ಯುತ್ತಮ ಗುಣ. ಆದ್ದರಿಂದ ಈ ಗೊಂಬೆಗೆ ಪ್ರಥಮ ಸ್ಥಾನ ಕೊಡಬಹುದು.

ಈ ಉತ್ತರದಿಂದ ಸಂತುಷ್ಟನಾದ ರಾಜ ಎರಡನೆಯ ದರ್ಜೆಯ ಗೊಂಬೆ ಯಾವುದೆಂದು ಕೇಳಿದನು. ಆಗ ಅವನು ಎರಡನೆಯ ಗೊಂಬೆಯನ್ನು ಎತ್ತಿ ಅದರ ಕಿವಿಯಲ್ಲಿ ಊದಿದನು. ಗಾಳಿ ಇನ್ನೊಂದು ಕಿವಿಯ ಮೂಲಕ ಹೊರಟು ಹೋಯಿತು. ಅದನ್ನು ಎತ್ತಿ ತೋರಿಸುತ್ತಾ ಇದು ಎರಡನೆಯ ದರ್ಜೆಯ ಗೊಂಬೆ ಎಂದನು. ಇದು ರಹಸ್ಯಗಳನ್ನು ಒಂದು ಕಿವಿಯಿಂದ ಕೇಳಿ ಮತ್ತೊಂದು ಕಿವಿಯಿಂದ ಬಿಟ್ಟು

ಬಿಡುವ ವ್ಯಕ್ತಿಗೆ ಸಮಾನ. ಇಂತಹ ವ್ಯಕ್ತಿಗಳಿಂದ ಪ್ರಯೋಜನವೇನೂ ಇಲ್ಲದಿದ್ದರೂ ನಷ್ಟವಂತೂ ಇಲ್ಲ. ಆದ್ದರಿಂದ ಇದಕ್ಕೆ ದ್ವಿತೀಯ ದರ್ಜೆ ಕೊಡಬಹುದು.

ಈ ಉತ್ತರವು ರಾಜನಿಗೆ ಹಿಡಿಸಿತು. ಅವನು ಮೂರನೆಯ ಗೊಂಬೆಯ ವೈಶಿಷ್ಟ್ಯವನ್ನು ತಿಳಿಸಲು ಮುಂದಾದರು. ಅದನ್ನು ಕೈಗೆತ್ತಿಕೊಂಡು ಕಿವಿಯಲ್ಲಿ ಊದಿದಾಗ ಗಾಳಿ ಬಾಯಿಯ ಮೂಲಕ ಹೊರ ಬಂತು. ಇದು ರಹಸ್ಯವನ್ನು



ಬಹಿರಂಗಪಡಿಸುವ ಬಾಯಿಬಡುಕನಂತೆ. ಇಂತಹ ವ್ಯಕ್ತಿಗಳು ಜಗಳಕ್ಕೆ ಕಾರಣಕರ್ತರಾಗುತ್ತಾರೆ. ಆದ್ದರಿಂದ ಈ ಗೊಂಬೆಗೆ ಅತ್ಯಂತ ಕೊನೆಯ ಸ್ಥಾನ.

ಈ ಉತ್ತರವನ್ನು ಕೇಳಿದ ರಾಜನು ಸಂತೋಷದಿಂದ ಉದ್ಗರಿಸಿದನು, "ಖಂಡಿತಾ ನೀನು ಗೊಂಬೆಗಳನ್ನು ಸರಿಯಾಗಿಯೇ ಗುರುತಿಸಿರುವೆ. ಅಂದಿನಿಂದ ಆ ವ್ಯಕ್ತಿ ರಾಜನ ಆಸ್ಥಾನದಲ್ಲಿ ಮಂತ್ರಿಯಾಗಿ ನೇಮಿಸಲ್ಪಟ್ಟನು.

❖❖❖

ಕಳ್ಳನ ಮನಪರಿವರ್ತನೆ

ನಮ್ಮ ತಂದೆಯವರ ಸ್ವಭಾವ ವಿಚಿತ್ರ. ಒಳ್ಳೆಯವರನ್ನು ಎಲ್ಲರೂ ಉಪಚರಿಸುತ್ತಾರೆ. ತಂದೆಯವರ ವೈಶಿಷ್ಟ್ಯವೆಂದರೆ ಅವರು ಕೆಟ್ಟವರನ್ನೂ ಆದರದಿಂದ ಕಾಣುತ್ತಿದ್ದರು. ಪ್ರತಿ ಶುಕ್ರವಾರದಂದು ನಮಗೆ ಪರಿಚಿತರಾದ ಯಾರಾದರೊಬ್ಬ ಕೆಟ್ಟ ವ್ಯಕ್ತಿಯನ್ನು ಊಟಕ್ಕೆ ಕರೆ ತರುತ್ತಿದ್ದರು. ಕಳೆದ ವಾರ ಗಫೂರ್‌ನನ್ನು ಕರೆ ತಂದಿದ್ದರು. ಅದಕ್ಕೆ ಮೊದಲು ಜಲಾಲ್‌ನಿಗೆ ಆತಿಥ್ಯ ನೀಡಿದ್ದರು. ನಮಗೆ ಅಂಥವರನ್ನು ಕರೆತರುವುದು ಇಷ್ಟವಾಗುತ್ತಿರಲಿಲ್ಲ. ತಾಯಿಗೂ ಇದರಿಂದ ಬಹಳ ಅಸಮಾಧಾನವಾಗುತ್ತಿತ್ತು. ಅವರು ಹೇಳುತ್ತಿದ್ದರು, "ಅಂಥವರನ್ನು ಮನೆಗೆ ಕರೆ ತರಬೇಡಿ. ಅವರು ಉಂಡ ಮನೆಗೆ ಎರಡು ಬಗೆಯುವವರು" ತಾಯಿಯವರ ಈ ಮಾತು ಕಳೆದ ವಾರವೇ ನಿಜವಾಗಿತ್ತು.

ತಂದೆಯವರು ಗಫೂರ್‌ನನ್ನು ಊಟಕ್ಕೆ ಆಮಂತ್ರಿಸಿದ್ದರು. ಊಟ ಮುಗಿದು ಹೊರಡುವಾಗ ನಮ್ಮ ಮನೆಯ ಅಂಗಳದಲ್ಲಿ ಬೆಳೆದಿದ್ದ ಜೋಳದ ಪೈರು ಅವನ ಕಣ್ಣಿಗೆ ಬಿತ್ತು. ಅವನು ಅದನ್ನು ಕಂಡು ಸಹನೆ ಮೀರಿ ಹೇಳಿದನು, "ನಿಮ್ಮ ಜೋಳ ಬಹಳ ಸೊಂಪಾಗಿ ಬೆಳೆದಿದೆಯಲ್ಲಾ" ಅದಕ್ಕೆ ತಂದೆಯವರು ಎಂದಿನಂತೆ ಸಾವಕಾಶದಿಂದ ಉತ್ತರಿಸಿದರು, "ಈ ದಿನ ಜುಮಾ ನಮಾಝಿನ ನಂತರ ಜೋಳ ಕೊಯ್ಯುವ ಇರಾದೆ ಇದೆ. ದೇವನಿಚ್ಛೆ ಇದ್ದರೆ ನೆರೆಹೊರೆಯವರಿಗೆಲ್ಲಾ ಅದರಿಂದ ಸ್ವಲ್ಪಂಶವನ್ನು ಕೊಡಬೇಕೆಂದು ಭಾವಿಸಿದ್ದೇನೆ."


ತಂದೆಯವರು ನಂತರ ನಮಾಝ್ ನಿರ್ವಹಿಸಲು ಮಸೀದಿಗೆ ಹೋದರು. ರಿಷಾದ್ ಅಣ್ಣನೂ ತಂದೆಯವರನ್ನು ಹಿಂಬಾಲಿಸಿದನು. ನಾವು ಮಹಿಳೆಯರು ಮತ್ತು ಮಕ್ಕಳು ಸ್ನಾನಾದಿ ಕೆಲಸಗಳಲ್ಲಿ ನಿರತರಾದೆವು. ಅಷ್ಟು ಹೊತ್ತಿಗೆ ನಮ್ಮ ನೆರೆಮನೆಯಾಕೆಯ ಕೇಳಿಸಿತು, "ಅಯ್ಯಯ್ಯೋ ಇಲ್ಲಿ ನೋಡಿ. ಗಫೂರ್‌ನ ಮಕ್ಕಳು ನಿಮ್ಮ ಜೋಳವನ್ನು ಕದಿಯುತ್ತಿದ್ದಾರೆ."

ತಾಯಿಯವರು ಹೊರಗೋಡಿ ಬಂದಾಗ ನೋಡುವುದೇನು? ಒಂದು ಭಾಗದ ಎಲ್ಲಾ ಜೋಳದ ತೆನೆಗಳನ್ನು ಲಪಟಾಯಿಸಿ ಗಫೂರ್‌ನ ಮಕ್ಕಳು ಓಟಕಿತ್ತಿದ್ದರು. ತಾಯಿಯವರು ಸಿಟ್ಟಿನಿಂದ ಏನೆಲ್ಲಾ ಬಡಬಡಿಸತೊಡಗಿದರು.

ಅದೇ ವೇಳೆ ತಂದೆಯವರು ಬಂದು, "ಏನು ಸಮಾಚಾರ?" ಎಂದು ಕೇಳಿದರು. ತಂದೆಯವರಿಗೆ ಎಲ್ಲಾ ವಿಚಾರಗಳನ್ನು ತಿಳಿಸಲಾಯಿತು. ಕಳ್ಳರಿಗೆ ತಕ್ಕ ಶಿಕ್ಷೆಯನ್ನು ನೀಡಬೇಕು. ಪೊಲೀಸರಿಗೆ ದೂರು ನೀಡಬೇಕು. ಇತ್ಯಾದಿ ಸಲಹೆಗಳು ಬಂದವು. ಎಲ್ಲವನ್ನೂ ಆಲಿಸಿದ ತಂದೆಯವರು, "ನಾನು ಅವನಿಗೆ ಸರಿಯಾದ ಶಿಕ್ಷೆ ನೀಡುತ್ತೇನೆ, ನೋಡುತ್ತಿರಿ" ಎಂದರು.

ಅನಂತರ ಜೋಳ ಕೊಯ್ಯುವ ಕೆಲಸ ಆರಂಭವಾಯಿತು. ನೆರೆಹೊರೆಯವರಿಗಾಗಿ ಕೆಲವು ಜೋಳದ ತೆನೆಗಳನ್ನು ಪ್ರತ್ಯೇಕ ಇರಿಸಲಾಯಿತು. ಗಫೂರ್‌ನಿಗೂ ಒಂದಂಶವನ್ನು ಇಡಲಾಯಿತು. ತಾಯಿಗೆ ಅದು ಸರಿಯೆನಿಸಲಿಲ್ಲ. ತಂದೆಯವರು, "ಎಷ್ಟಾದರೂ ಅವನು ನಮ್ಮ ನೆರೆಯವನಲ್ಲವೇ?" ಎಂದರೆ, ತಾಯಿ "ಸಾಧ್ಯವೇ ಇಲ್ಲ. ಆ ಕಳ್ಳನಿಗೆ ಏನೂ ಕೊಡಬಾರದು" ಎನ್ನುತ್ತಿದ್ದರು.

ನೆರೆಯವರಿಗೆ ನೀಡಬೇಕಾದ ಜೋಳದ ತೆನೆಗಳನ್ನು ಹಿಡಿದುಕೊಂಡು ತಂದೆಯವರು ಸ್ವತಃ ಮುಂದೆ ಸಾಗಿದರು. ರಿಷಾದ್‌ನೊಡನೆ ಇದು ಅವರಿಗೆ ಕೊಟ್ಟು ಬಾ, ಅದನ್ನು ಇವರಿಗೆ ಕೊಡು ಎಂದು ಅವರವರ ಪಾಲನ್ನು ಕಳುಹಿಸಿಕೊಟ್ಟರು. ಗಫೂರ್‌ನ ಪಾಲನ್ನು ಕೊಟ್ಟು ಬರಲು ಹೇಳಿದಾಗ ರಿಷಾದ್ ಸ್ವಲ್ಪ ಹಿಂಜರಿದನು. ಕೊನೆಗೆ ತಂದೆಯವರೇ ಮುಂದೆ ಹೋಗಿ ಗಫೂರ್‌ನ ಮನೆ ಬಾಗಿಲನ್ನು ತಟ್ಟಿದರು.



ನಾನು ಮೆಲ್ಲನೆ ಕಿಟಕಿಯಿಂದ ಇಣುಕಿ ನೋಡಿದೆ. ಗಫೂರ್ ಒಳಗೇ ಇದ್ದನು. ನಾವು ಬಂದಿರುವುದನ್ನು ಗ್ರಹಿಸಿ ಕದ್ದು ತಂದಿದ್ದ ಜೋಳದ ತೆನೆಗಳನ್ನು ಅಡಗಿಸಿಡ ತೊಡಗಿದರು. ತಂದೆಯವರು ನನ್ನನ್ನು ಕಿಟಕಿಯಲ್ಲಿ ಇಣುಕುವುದನ್ನು ಪ್ರವಾದಿಯವರು(ಸ) ವಿರೋಧಿಸಿದ್ದಾರೆ ಎಂದು ಹೇಳಿದರು.

ಒಳಗಿನಿಂದ ಯಾರೂ ಬರದೇ ಇದ್ದುದನ್ನು ಕಂಡು ತಂದೆಯವರು ಪುನಃ ಜೋರಾಗಿ "ಅಸ್ಸಲಾಮ್ ಅಲೈಕುಮ್. ಗಫೂರ್ ಇದ್ದಾರೆಯೇ?" ಎಂದು ಪ್ರಶ್ನಿಸಿದರು. ಒಳಗಿನಿಂದ 'ಇಲ್ಲ' ಎಂಬ ಉತ್ತರ ಬಂತು. ಇವರು ಎಂತಹ ಸುಳ್ಳು ಹೇಳುತ್ತಿದ್ದಾರೆ ಎಂದೆನಿಸಿತು ನನಗೆ. ತಂದೆಯವರು ಮತ್ತೆ ಹೇಳಿದರು, "ಯಾರಾದರೂ ಚಿಕ್ಕ ಮಕ್ಕಳನ್ನು ಕಳುಹಿಸಿ ಕೊಡಿ." ಸ್ವಲ್ಪ ಹೊತ್ತಿನ ನಂತರ ಚಿಕ್ಕ ಹುಡುಗಿಯೊಬ್ಬಳು ಹೊರಗೆ ಬಂದಳು. ತಂದೆಯವರು ಜೋಳದ ತೆನೆಗಳನ್ನು ನೀಡುತ್ತಾ ಹೇಳಿದರು, ಇಂದು ನಾವು ಬೆಳೆ ಕೊಯ್ದಿದ್ದೇವೆ. ಇದು ನಿಮಗೆ ಉಡುಗೊರೆ.

ಮನೆಗೆ ಬಂದಾಗ ತಾಯಿಯವರು ಕೋಪದಿಂದ ಕಿಡಿ ಕಿಡಿಯಾಗಿದ್ದರು. "ಆ ಕಳ್ಳನಿಗೆ ಉಡುಗೊರೆ ನೀಡಿ ಬಂದಿರಾ?" ಎಂದಾಗ ತಾಯಿಯನ್ನು ತಡೆಯುತ್ತಾ ತಂದೆಯವರು ಒಂದು ಉದಾಹರಣೆ ನೀಡಿದರು.

"ಒಂದೂರಿನಲ್ಲಿ ಒಬ್ಬ ಹಿರಿಯರಿದ್ದರು. ಒಂದು ದಿನ ಅವರು ನದಿ ದಂಡೆಯಲ್ಲಿ ಕುಳಿತಿರುವಾಗ ಚೇಳೊಂದು ತೇಲುತ್ತಾ ಬರುತ್ತಿರುವುದು ಕಾಣಿಸಿತು. ಅದನ್ನು ಕಂಡು ಹಿರಿಯ ವ್ಯಕ್ತಿಗೆ ಮರುಕ ಹುಟ್ಟಿತು. ಅವರು ಅದನ್ನು ನೆಲಕ್ಕೆ ತಂದು ಬಿಡಬೇಕೆಂದು ಕೈಗೆತ್ತಿಕೊಂಡರು. ಅದೇ ಹೊತ್ತಿಗೆ ಚೇಳು ಅವರಿಗೆ ಕಡಿಯಿತು. ಅವರ ಕೈ ತಪ್ಪಿ ಪುನಃ ಚೇಳು ನೀರಿಗೆ ಬಿದ್ದು ಬಿಟ್ಟಿತು. ಪುನಃ ಅವರು ಅದನ್ನು ಎತ್ತಿಕೊಂಡರು. ಮತ್ತೊಮ್ಮೆ ಅದು ಅವರಿಗೆ ಕಡಿಯಿತು. ಕೈಯನ್ನು ಜಾಡಿಸಿದಾಗ ಅದು ನೀರಿಗೆ ಬಿದ್ದು ಬಿಟ್ಟಿತು. ಆ ಹೊತ್ತಿಗೆ ಅಲ್ಲಿಗೆ ಒಬ್ಬ ವ್ಯಕ್ತಿ ಬಂದು ಕೇಳಿದನು, "ಇದೇನು ಮೂರ್ಖತನ, ಅದು ನಿಮಗೆ ಕಚ್ಚುತ್ತಿರುವಾಗ ನೀವು ಅದರ ಮೇಲೆ ಕರುಣೆದೋರುತ್ತಿರುವಿರಲ್ಲ!" ಅದಕ್ಕೆ ಹಿರಿಯರು ಉತ್ತರಿಸಿದರು.

"ಅದು ತನ್ನ ಅಭ್ಯಾಸವನ್ನು ಪಾಲಿಸುತ್ತಿದೆ. ನಾನು ನನ್ನ ಅಭ್ಯಾಸದಂತೆ ಮಾಡುತ್ತಿದ್ದೇನೆ."

ಈ ಕಥೆಯನ್ನು ಹೇಳಿ ತಂದೆಯವರು ತಾಯಿಯನ್ನು ನೋಡಿ ಹೇಳಿದರು,

"ಕುರ್‌ಆನಿನಲ್ಲಿ ಕೆಡುಕನ್ನು ಒಳಿತಿನಿಂದ ಎದುರಿಸಿ" ಎಂದು ಹೇಳಲಾಗಿದೆ.

ಅನಂತರ ನಾವೆಲ್ಲರೂ ನಮ್ಮ ಕೆಲಸಗಳಲ್ಲಿ ನಿರತರಾದೆವು. ಸ್ವಲ್ಪ ಹೊತ್ತಿನ ಬಳಿಕ ನಮ್ಮ ಮನೆಯ ಕರೆಗಂಟೆ ಸದ್ದು ಮಾಡಿತು. ತಂದೆಯವರು ಎದ್ದು

ಹೋಗಿ ಬಾಗಿಲು ತೆರೆದರು. ಹೊರಗೆ ನಿಂತಿದ್ದ ಗಫ್ಫೂರ್ ಲಗುಬಗೆಯಿಂದ ಒಳಬಂದು ತಂದೆಯವರ ಕ಼ಾಲಿಗೆ ಬಿದ್ದನು. "ನನ್ನನ್ನು ಕ್ಷಮಿಸಿ! ನಾನು ತಪ್ಪು ಮಾಡಿದ್ದೇನೆ" ಎಂದು ಗೋಗರೆದನು. ತಂದೆಯವರು ಗಫ್ಫೂರ್‌ನನ್ನು ಎತ್ತಿ ಹಿಡಿದು "ಪರ್ವಾಗಿಲ್ಲ. ಅದರಲ್ಲೇನಾಯಿತು" ಎನ್ನುತ್ತಾ ಸಂತೈಸತೊಡಗಿದರು. ನಂತರ ಮರೆಯಲ್ಲಿ ನಿಂತಿದ್ದ ಗಫ್ಫೂರ್‌ನ ಪತ್ನಿ ಮುಂದೆ ಬಂದು, "ಎಲ್ಲ ತಪ್ಪು ನನ್ನದೇ. ನಾನೇ ಮಕ್ಕಳನ್ನು ಜೋಳ ಕದಿಯಲು ಕಳುಹಿಸಿದ್ದೆ" ಎಂದು ಹೇಳಿದಳು. ತಂದೆಯವರು ಹೇಳಿದರು, "ಅದಕ್ಕೇನೂ ಬೇಸರವಿಲ್ಲ. ನೀವು ಮನೆಗೆ ಹೋಗಿ. ಮುಂದೇನಾದರೂ ಸಹಾಯ ಬೇಕಿದ್ದರೆ ಹೇಳಿ. ದೇವನಿಚ್ಛಿಸಿದರೆ ನಿಮಗೆ ನೆರವಾಗಲು ಪ್ರಯತ್ನಿಸುತ್ತೇನೆ."

ಅನಂತರ ಗಫ್ಫೂರ್ ಬಹಳ ಬದಲಾಗಿ ಬಿಟ್ಟಿದ್ದನ್ನು ಕಂಡು ನಮಗೆ ಆಶ್ಚರ್ಯವಾಯಿತು. ಅವನು ನಮಾಝ್ ಮಾಡಲು ಮಸೀದಿಗೆ ಹೋಗಲಿಕ್ಕೂ ಆರಂಭಿಸಿದನು. ಈಗ ಅವನು ನಮ್ಮ ಅತ್ಯುತ್ತಮ ನೆರೆವಾಸಿಯಾಗಿದ್ದಾನೆ. ಖಂಡಿತಾ ಒಳಿತು ಕೆಡುಕನ್ನು ದೂರೀಕರಿಸುತ್ತದೆ ಎಂಬುದಕ್ಕೆ ಗಫ್ಫೂರ್ ಒಂದು ಜೀವಂತ ಸಾಕ್ಷಿ.

❖❖❖

ಮಾತನಾಡುವ ಮೈನಾ ಹಕ್ಕಿ


ಅಂದು ಹಾಜಿರಕ್ಕನ ಮದುವೆಯ ದಿನ. ನೆಂಟರಿಷ್ಟರೆಲ್ಲಾ ಬಂದು ಸೇರಿದ್ದರು. ಮಾವ, ಅತ್ತೆ, ಚಿಕ್ಕಪ್ಪ, ಚಿಕ್ಕಮ್ಮ ಎಲ್ಲರೂ ಉಪಸ್ಥಿತರಿದ್ದರು. ಅನೇಕ ಮಕ್ಕಳೂ ಬಂದಿದ್ದರು. ನನ್ನ ಮಾವನ ಮಗ ಸಈದ್ ಸಹ ಬಂದಿದ್ದನು. ಜೊತೆಯಲ್ಲಿ ಮೈನಾ ಹಕ್ಕಿಯೊಂದನ್ನು ಗೂಡಿನಲ್ಲಿ ಹಾಕಿ ತಂದಿದ್ದನು.

ಈ ಹಿಂದೆ ಸಈದ್ ಅನೇಕ ಬಾರಿ ನಮ್ಮ ಮನೆಗೆ ಬಂದಿದ್ದನು. ನಾನೂ ಅವನ ಮನೆಗೆ ಹೋಗಿದ್ದೆ. ನಾನು ಅವನನ್ನು ಚೆನ್ನಾಗಿ ಬಲ್ಲೆ. ಬಹಳ ತುಂಟ ಹುಡುಗ. ನಮಾಝ್ ಮಾಡುತ್ತಿರಲಿಲ್ಲ. ಉಪವಾಸ ಆಚರಿಸುತ್ತಿರಲಿಲ್ಲ, ತಂದೆ ತಾಯಿಗಳ ಮಾತು ಕೇಳುತ್ತಿರಲಿಲ್ಲ. ಓದು ಬರಹ ಬೇಡವೇ ಬೇಡ. ದಿನವಿಡೀ ಆಡುವುದರಲ್ಲೇ ಆಸಕ್ತಿ. ಜಗಳ ಕರೆಯುವುದು, ಬಯ್ಯುವುದು, ಇತರರ ವಸ್ತುಗಳನ್ನು ಲಪಟಾಯಿಸುವುದು ಅವನಿಗೆ ಅಭ್ಯಾಸವಾಗಿ ಬಿಟ್ಟಿತ್ತು. ಮನೆಯವರು ಅವನಿಂದ ರೋಸಿ ಹೋಗಿ ಅವನನ್ನು ಹೇಗೆ ಸುಧಾರಿಸುವುದು ಎಂದು ಆಲೋಚಿಸುತ್ತಿದ್ದರು.

ಹಾಜಿರಕ್ಕನ ಮದುವೆಗೆ ಬಂದಿದ್ದ ನಾನು ಎರಡು ಮೂರು ದಿನ ಅವನಿಗೆ ಹೆದರುತ್ತಿದ್ದೆ. ಆದರೆ ಆಶ್ಚರ್ಯವೆಂಬಂತೆ ಈಗ ಅವನು ಬಹಳ ಬದಲಾಗಿ ಬಿಟ್ಟಿದ್ದ. ಅವನು ಬೆಳಿಗ್ಗೆ ಎದ್ದು ನಮಾಝ್ ಮಾಡುತ್ತಿದ್ದ, ತಂದೆ ತಾಯಿಗಳ ಮಾತು ಕೇಳುತ್ತಿದ್ದ, ಮಕ್ಕಳೊಂದಿಗೆ ಜಗಳ ಕಾಯುತ್ತಿರಲಿಲ್ಲ. ಅವನು ಬಹಳ ಒಳ್ಳೆಯವನಾಗಿ ಬಿಟ್ಟಿದ್ದ. ಅವನನ್ನು ಕಂಡು ನನ್ನ ಭಯ ಕಡಿಮೆಯಾಗತೊಡಗಿತು. ಸಈದ್ ತನ್ನ ಜೊತೆಗೆ ತಂದಿದ್ದ ಮೈನಾ ಹಕ್ಕಿಯನ್ನು ಬಹಳ ಪ್ರೀತಿಸುತ್ತಿದ್ದ. ಎಲ್ಲಿ ಹೋಗುವಾಗಲೂ ಅದನ್ನು ಜೊತೆಯಲ್ಲಿ ಇರಿಸುತ್ತಿದ್ದ.

ನಾನು ಒಂದು ದಿನ ಸಈದ್‌ನೊಂದಿಗೆ ವಿಚಾರಿಸಿದೆ, "ಸಈದ್! ನೀನು ಹೇಗೆ ಇಷ್ಟು ಸುಧಾರಿಸಿದೆ. ಮೈನಾ ಹಕ್ಕಿಯನ್ನು ನೀನೇಕೆ ಇಷ್ಟಪಡುತ್ತಿ? " ಅದಕ್ಕೆ ಸಈದ್ ಉತ್ತರಿಸಿದನು, "ಈ ಮೈನಾದ ಮೂಲಕವೇ ನಾನು ಇಷ್ಟು ಸುಧಾರಿಸಿದ್ದೇನೆ." ನಾನು ಆಶ್ಚರ್ಯದಿಂದ "ಅದು ಹೇಗೆ?" ಎಂದು ಕೇಳಿದೆ. ಸಈದ್ ವಿವರಿಸಿದನು:

ಒಂದು ದಿನ ನಮ್ಮ ತಂದೆ ಎಲ್ಲಿಂದಲೋ ಮಾತನಾಡುವ ಮೈನಾ ಹಕ್ಕಿಯನ್ನು ತಂದರು. ನಾನು ಕೂಡಲೇ ಅದರ ಬಳಿಗೆ ಓಡಿದೆ. ಮೈನಾ ಹಕ್ಕಿಯನ್ನು ನನಗೆ



ಕೊಡಬೇಕೆಂದು ತಂದೆಯವರಲ್ಲಿ ಹಟ ಹಿಡಿದೆ. ತಂದೆಯವರು ಹಕ್ಕಿಯ ಪಂಜರವನ್ನು ನನಗೆ ನೀಡಿದರು. ನಾನು ಅದನ್ನು ಹಿಡಿದುಕೊಂಡು ಅತ್ತಿತ್ತ ಓಡಾಡುತ್ತಿದ್ದೆ. ಕೆಲವೊಮ್ಮೆ ಅಶ್ಲೀಲ ಹಾಡುಗಳನ್ನು ಹಾಡುತ್ತಿದ್ದೆ. ಒಂದು ದಿನ ನಾನು ಹಾಡಲು ಶುರು ಮಾಡಿದಾಗ ಮೈನಾ ಹಕ್ಕಿಯೂ ನನ್ನ ಜೊತೆಗೆ ಇಂಪಾಗಿ ಹಾಡಲಾರಂಭಿಸಿತು.

"ಪ್ರಭುವನ್ನು ಹೆದರಿರಿ, ಸತ್ಕಾರ್ಯ ಮಾಡಿರಿ." ನನಗೆ ಮೈನಾ ಹಕ್ಕಿಯ ಹಾಡು ಬಹಳ ಹಿಡಿಸಿತು. ಅದು ಸುಮ್ಮನಾದಾಗ ನಾನು ಮತ್ತೊಮ್ಮೆ ಹಾಡಲು ಸೂಚಿಸಿದೆ. ಅದು, "ಪ್ರಭುವನ್ನು ಹೆದರಿರಿ, ಸತ್ಕಾರ್ಯ ಮಾಡಿರಿ" ಎನ್ನತೊಡಗಿತು.

ಸತ್ಕಾರ್ಯ ಮಾಡಿರಿ ಎಂದರೇನೆಂದು ನನಗೆ ಅರ್ಥವಾಯಿತು. ಆದರೆ ಪ್ರಭುವನ್ನು ಹೆದರುವುದು ಹೇಗೆಂದು ತಿಳಿಯಲಿಲ್ಲ. ಅರ್ಥ ಕಟ್ಟಿಕೊಂಡು ಏನು ಮಾಡಬೇಕಾಗಿದೆ ಎಂದು ನಾನು ಸುಮ್ಮನಾದೆ.

ನಾನು ಕೆಟ್ಟವನಂತೆ ವರ್ತಿಸಿದಾಗಲೆಲ್ಲಾ ಮೈನಾ ಹಕ್ಕಿ ಮಧ್ಯೆ ಬಾಯಿ ಹಾಕಿ ಹಾಡಲು ಆರಂಭಿಸುತ್ತಿತ್ತು. ನಾನು ಜಗಳ ಕಾದ ತಕ್ಷಣ ಅದು "ಪ್ರಭುವಿಗೆ ಹೆದರಿರಿ, ಸತ್ಕಾರ್ಯ ಮಾಡಿರಿ" ಎಂಬ ರಾಗ ಆರಂಭಿಸುತ್ತಿತ್ತು. ನಾನು ಬಯ್ದಾಡಿದಾಗ, ತಾಯಿಯ ಮಾತು ಒಪ್ಪದಾಗ ಮತ್ತು ಇಂತಹ ಎಲ್ಲ ಸಂದರ್ಭದಲ್ಲೂ ಹಕ್ಕಿ

ರಾಗದಿಂದ ಹೀಗೆ ಹಾಡುತ್ತಿತ್ತು, "ಪ್ರಭುವಿಗೆ ಹೆದರಿರಿ, ಸತ್ಕಾರ್ಯ ಮಾಡಿರಿ" ಎಂಬ ವಾಕ್ಯ ನನಗೆ ಕಂಠಸ್ಥವಾಗಿ ಹೋಯಿತು. ನಾನು ಸದಾ ಅದನ್ನೇ ಹಾಡುತ್ತಿದ್ದೆ.

ಒಂದು ದಿನ ನಮ್ಮ ತಂದೆ ಬಂದು ನನ್ನೊಡನೆ ಕೇಳಿದರು, "ನೀನು ಹಾಡುವುದರ ಅರ್ಥವೇನೆಂದು ನಿನಗೆ ಗೊತ್ತೇ?"

ನಾನು ನಗುತ್ತಾ ಹೇಳಿದೆ "ಸತ್ಕಾರ್ಯ ಮಾಡಿರಿ" ಎಂದರೆ ಗೊತ್ತು. ಆದರೆ ಪ್ರಭುವಿಗೆ ಹೆದರಿರಿ ಎಂದರೆ ಅರ್ಥವಾಗಿಲ್ಲ.

ಹಾಗಾದರೆ ಸತ್ಕಾರ್ಯ ಮಾಡಿರಿ ಎಂದರೇನು? ತಂದೆಯವರು ವಿಚಾರಿಸಿದರು. ನಾನು ಹೇಳಿದೆ, "ನಮಾಝ್ ಮಾಡುವುದು, ಉಪವಾಸ ಆಚರಿಸುವುದು, ತಂದೆ ತಾಯಿಗಳ ಮಾತು ಕೇಳುವುದು, ಸತ್ಯ ಹೇಳುವುದು, ಹಿರಿಯರನ್ನು ಗೌರವಿಸುವುದು ಇತ್ಯಾದಿಗಳೆಲ್ಲಾ ಸತ್ಕಾರ್ಯಗಳಾಗಿವೆ."

"ಇದೆಲ್ಲಾ ಬರಿ ಹೇಳಲಿಕ್ಕೋ ಅಥವಾ ಅದರಂತೆ ನಡೆಯಲಿಕ್ಕೋ?" ತಂದೆಯವರು ಕೇಳಿದರು. ನಾನು ನಾಚಿಕೆಯಿಂದ ತಲೆತಗ್ಗಿಸಿದೆ. ಅನಂತರ ತಂದೆಯವರು ನನಗೆ ದೇವನನ್ನು ಹೆದರುವುದು ಹೇಗೆ ಎಂದು ಹೇಳಿಕೊಟ್ಟರು, ಅವರು ಹೇಳಿದರು:

ನೋಡು! ಅಲ್ಲಾಹನು ನಮ್ಮ ಪ್ರಭು. ಅಂದರೆ ನಮ್ಮ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಿರುವವನು, ನಮಗೆ ಎಲ್ಲವನ್ನೂ ಒದಗಿಸಿ ಕೊಡುವವನು, ನಮಗೆ ಅನ್ನ, ನೀರು ಕರುಣಿಸಿ ಜೀವನಾಧಾರಗಳನ್ನು ದಯಪಾಲಿಸಿದವನು ಅವನೇ ಆಗಿದ್ದಾನೆ. ಹೊಲ ತೋಟಗಳನ್ನೂ ಪ್ರಾಣಿ ಪಕ್ಷಿಗಳನ್ನೂ ಆತನು ನಮಗಾಗಿಯೇ ಸೃಷ್ಟಿಸಿದ್ದಾನೆ. ನಾವು ಅವನ ಆದೇಶದಂತೆ ನಡೆಯಬೇಕು. ಅವನ ಉಪಕಾರಗಳಿಗಾಗಿ ಕೃತಜ್ಞತೆ ಸಲ್ಲಿಸಬೇಕು. ಅವನ ಆದೇಶದಂತೆ ನಡೆದವರಿಗೆ ಅವನು ಸ್ವರ್ಗ ನೀಡುತ್ತಾನೆ. ತಮ್ಮಿಚ್ಛೆಯಂತೆ ವರ್ತಿಸಿದವರನ್ನೇ ಅವನು ನರಕಕ್ಕೆ ತಳ್ಳುತ್ತಾನೆ.

ತಂದೆಯವರು ಇದನ್ನು ಹೇಳಿದಾಗ ನನ್ನ ಮೈನವಿರೇಳಿತು. ನಾನು ಭಯದಿಂದ ಸಣ್ಣಗೆ ಕಂಪಿಸಿದೆ. ಆಗಲೇ ದೇವನನ್ನು ಭಯಪಡುವುದೆಂದರೆ ಏನೆಂದು ಅರ್ಥವಾಯಿತು.

ಅಂದಿನಿಂದ ನಾನು ಒಂದೊಂದೇ ಕೆಡುಕುಗಳನ್ನು ಬಿಡುತ್ತಾ ಬಂದೆ. ಬೆಳಿಗ್ಗೆ ಎದ್ದು ನಮಾಝ್ ಮಾಡಲು ಆರಂಭಿಸಿದೆ. ಶಾಲೆಗೆ ಆಸಕ್ತಿಯಿಂದ ಹೋಗತೊಡಗಿದೆ, ಕೆಟ್ಟವರ ಸಂಗದಿಂದ ದೂರವಿರತೊಡಗಿದೆ. ಆದ್ದರಿಂದಲೇ ಈಗ ನಾನು ಹಿಂದಿನ ಸಈದ್ ಆಗಿ ಉಳಿದಿಲ್ಲ. ಮೈನಾ ಹಕ್ಕಿಯ ಎರಡು ವಾಕ್ಯಗಳು ನನಗೆ ಪಾಠ ಕಲಿಸಿತು. ಆದ್ದರಿಂದಲೇ ನಾನು ಅದನ್ನು ಬಹಳ ಮೆಚ್ಚುತ್ತೇನೆ.

ಸಈದ್‌ನ ಮಾತು ಕೇಳಿ ನಾನೂ ಅದನ್ನು ಪ್ರೀತಿಯಿಂದ ನೋಡಿದೆ. ಹಕ್ಕಿ ಆನಂದದಿಂದ ಹಾಡಿತು, "ಪ್ರಭುವನ್ನು ಹೆದರಿರಿ, ಸತ್ಕಾರ್ಯ ಮಾಡಿರಿ."

❖❖❖

ಕರಿಯ ಒಕ್ಕಣ್ಣ

ಅಗಸ ಕರಿಯನನ್ನು ನಾನು ಮೊದಲು ಅವನ ತಾಯಿಯ ಜೊತೆ ನೋಡಿದ್ದೆ. ಅವನ ತಾಯಿ ನಮ್ಮ ಮನೆಯ ಅಗಸಗಿತ್ತಿಯಾಗಿದ್ದಳು. ಒಮ್ಮೆ ಅಗಸ ಕರಿಯ ತನ್ನ ತಾಯಿಯ ಜೊತೆಗೆ ನಮ್ಮ ಮನೆಗೆ ಬಂದನು. ಅವನು ಎಷ್ಟು ಕಪ್ಪಾಗಿದ್ದನೆಂದರೆ ಅದನ್ನು ವರ್ಣಿಸಲು ಸಾಧ್ಯವಿಲ್ಲ. ಕಪ್ಪು ವರ್ಣದವನಾಗಿರುವ ಜೊತೆಗೆ ಅವನು ಒಕ್ಕಣ್ಣನೂ ಆಗಿದ್ದ. ಅವನ ಕಪ್ಪು ಬಣ್ಣ ಮತ್ತು ಒಂಟಿ ಕಣ್ಣು ನನಗೆ ಅಸಹ್ಯವೆನಿಸಿತು. ಅವನ ರೂಪ ಭಯಾನಕವಾಗಿತ್ತು. ಅವನನ್ನು ನೋಡುತ್ತಲೇ ನಾನು ತಾಯಿಯ ಬಳಿಗೆ ಹೋಗಿ ಕುಳಿತೆ. ಕರಿಯ ಒಕ್ಕಣ್ಣ ನಮ್ಮ ಮನೆಯಲ್ಲಿ ಇದ್ದಷ್ಟು ಸಮಯವೂ ನಾನು ತಾಯಿಗಂಟಿಕೊಂಡಿದ್ದೆ. ಅಗಸಗಿತ್ತಿ ನಮ್ಮ ಕೊಳೆಯಾದ ಬಟ್ಟೆಗಳನ್ನೆಲ್ಲಾ ಸಂಗ್ರಹಿಸಿ, ಮೂಟೆಕಟ್ಟಿ ಕರಿಯನ ತಲೆಯ ಮೇಲೆ ಇಟ್ಟು ಜೊತೆಯಲ್ಲಿ ಹೊರಟು ಹೋದಳು. ಆಗ ನಾನು ನೆಮ್ಮದಿಯ ಉಸಿರೆಳೆದೆ.

ತಾಯಿಗೆ ನನ್ನ ಈ ವರ್ತನೆ ಹಿಡಿಸಲಿಲ್ಲ. ಕರಿಯ ಹೊರಟು ಹೋದ ತಕ್ಷಣ ಕೇಳಿದಳು: "ನೀನು ನನ್ನನ್ನು ಹಿಡಿದುಕೊಂಡು ಯಾಕೆ ಕುಳಿತಿದ್ದಿ" ನಾನು ಹೇಳಿದೆ, "ಅಮ್ಮಾ! ಅವನೆಷ್ಟು ಕಪ್ಪಾಗಿದ್ದಾನೆ. ಜೊತೆಗೆ ಒಕ್ಕಣ್ಣನೂ ಕೂಡ. ಅವನನ್ನು ಮನೆಗೆ ಬರಲು ಬಿಡಬೇಡಿ. ಅವನನ್ನು ಕಂಡರೆ ನನಗೆ ಹೆದರಿಕೆಯಾಗುತ್ತದೆ."

ನಾನು ಸುಮ್ಮನಾದಾಗ ತಾಯಿ ನನಗೆ ಉಪದೇಶ ನೀಡಿದರು. "ಮಗನೇ! ಒಳ್ಳೆಯ ಮತ್ತು ಕೆಟ್ಟ ರೂಪಗಳನ್ನು ಅಲ್ಲಾಹನು ದಯಪಾಲಿಸಿದ್ದಾನೆ. ಅಲ್ಲಾಹನು ನಿನ್ನನ್ನು ಬಿಳಿಯ ಸುಂದರ ಸ್ವರೂಪಿಯಾಗಿ ಮಾಡಿದ್ದಾನೆ. ಕರಿಯನನ್ನು ಕಪ್ಪಗೆ ಮತ್ತು ಒಂಟಿ ಕಣ್ಣಿನವನಾಗಿ ಮಾಡಿದ್ದಾನೆ. ಇವೆಲ್ಲಾ ಅಲ್ಲಾಹನ ನಿಯಮ. ಅದರ ರಹಸ್ಯಗಳನ್ನು ಯಾರಿಂದಲೂ ತಿಳಿಯಲು ಸಾಧ್ಯವಿಲ್ಲ. ಆದರೆ ಯಾರದಾದರೂ ಮುಖ ನೋಡಿ ಅವನು ಕೆಟ್ಟವನೆಂದು ನೀನು ಹೇಗೆ ನಿರ್ಧರಿಸುತ್ತೀಯಾ? ನಿನ್ನ ಈ ಮಾತು ಖಂಡಿತಾ ಸರಿಯಲ್ಲ. ಕರಿಯನ ಅಭ್ಯಾಸಗಳು ನಿನಗಿಂತ ಒಳ್ಳೆಯದಿರಲೂ ಸಾಧ್ಯವಿದೆ."

ಹೀಗೆ ತಾಯಿ ಬಹಳ ಸಮಜಾಯಿಸಿದಳು. ಆದರೆ ನನ್ನ ಮನಸ್ಸಿನಲ್ಲಿ ಅವನು ಕೆಟ್ಟವನು ಎಂಬ ಭಾವನೆ ಬೇರೂರಿ ಬಿಟ್ಟಿತ್ತು. ಎಷ್ಟಾದರೂ ಆ ಭಾವನೆ ನನ್ನಿಂದ ದೂರವಾಗಲಿಲ್ಲ.



ಅನಂತರ ಕರಿಯನನ್ನು ನೋಡುತ್ತಲೇ ನಾನು ಮುಖ ತಿರುಗಿಸಿಕೊಳ್ಳುತ್ತಿದ್ದೆ. ಅವನು ನನಗೆ ಸಲಾಮ್ ಹೇಳುತ್ತಿದ್ದ. 'ಅಣ್ಣಾ' ಎಂದು ಕರೆಯುತ್ತಿದ್ದ. ಆದರೆ ನಾನು ಏನೂ ಉತ್ತರಿಸದೇ ಅವನಿಂದ ದೂರವಾಗುತ್ತಿದ್ದೆ.

ಇದಾಗಿ ಎಂಟು-ಒಂಭತ್ತು ದಿನಗಳಾಗಿರಬಹುದು. ತಾಯಿ ಒಂದು ರೂಪಾಯಿಯನ್ನು ಕರವಸ್ತ್ರದಲ್ಲಿ ಕಟ್ಟಿ ಅದನ್ನು ನನಗೆ ಕೊಟ್ಟು ಹೇಳಿದರು, "ಪೇಟೆಗೆ ಹೋಗಿ ಒಂದು ಸೇರು ಉಪ್ಪು ತಾ. ಅಂಗಡಿಯವ ಕೊಡುವ ಚಿಲ್ಲರೆಯನ್ನು ಕರವಸ್ತ್ರದಲ್ಲಿ ಕಟ್ಟಿಕೋ, ಎಲ್ಲಿಯೂ ಬಿಸಾಡಬೇಡ."

ನಾನು ಸಾಮಾನು ಕೊಳ್ಳಲು ಪೇಟೆಗೆ ಹೋದೆ. ಒಂದು ಅಂಗಡಿಯಿಂದ ಸಾಮಾನು ಕೊಳ್ಳುತ್ತಿದ್ದಂತೆ ಕರಿಯ ಅಲ್ಲಿಗೇ ಬಂದು ಬಿಟ್ಟ. ಕರಿಯ ಒಕ್ಕಣ್ಣನನ್ನು ನೋಡಿ ನನಗೆ ಹೆದರಿಕೆಯಾಯಿತು. ಅವನು ನನಗೆ ಸಲಾಮ್ ಹೇಳಿದನು. ನಾನು ಮನಸ್ಸಿನಲ್ಲೇ, "ಇವತ್ತು ಇವನು ನನ್ನಿಂದ ಹಣ ಕಿತ್ತುಕೊಳ್ಳುತ್ತಾನೆ" ಎಂದು ಭಾವಿಸಿದೆ. ನಾನು ಅಂಗಡಿಯಲ್ಲಿ ಸಂಕಟಕ್ಕೆ ಸಿಲುಕಿಕೊಂಡಿದ್ದೆ. ಈಗ ಉಪ್ಪು ತೆಗೆದುಕೊಳ್ಳದೇ ಹೋಗುವುದು ಹೇಗೆ? ನಂತರ ಅಂಗಡಿಯವನು ಉಪ್ಪು ಕೈಗಿತ್ತ ತಕ್ಷಣ ಅದನ್ನು ತೆಗೆದುಕೊಂಡು ಓಡ ತೊಡಗಿದೆ. ಸ್ವಲ್ಪ ದೂರ ನಡೆದು ಹಿಂದಿರುಗಿ ನೋಡಿದಾಗ ಅವನು ನನ್ನನ್ನು ಕರೆದನು.

"ಸಲೀಮಣ್ಣಾ! ಸ್ವಲ್ಪ ನಿಲ್ಲು" ಇದನ್ನು ಕೇಳುತ್ತಲೇ ನಾನು ಇನ್ನೂ ಜೋರಾಗಿ ಓಡಿದೆ. ಅವನೂ ನನ್ನ ಹಿಂದೆಯೇ ಓಡತೊಡಗಿದ. ರಸ್ತೆಯುದ್ದಕ್ಕೂ ಅವನು ನನ್ನನ್ನು ಕರೆಯುತ್ತಲೇ ಇದ್ದ.

ನಾನು ನಡುಗುತ್ತಾ ಮನೆ ತಲುಪಿದೆ. ಬಾಗಿಲಿಗೆ ಹೆಜ್ಜೆ ಇಡುತ್ತಲೇ ತಾಯಿಯನ್ನು ಕೂಗಿ ಕರೆದೆ. ಪಾಪ ಅವರಿಗೇನು ಗೊತ್ತು. ಅವರು ಓಡಿ ಬಂದು, 'ಏನಾಯಿತು?' ಎಂದು ವಿಚಾರಿಸಿದರು. "ಇವತ್ತು ಕರಿಯ ಒಕ್ಕಣ್ಣ ನನ್ನ ಹಿಂದೆ ಬಿದ್ದಿದ್ದಾನೆ. ಅವನು ಖಂಡಿತಾ ಕೆಟ್ಟವನು. ಬಹಳ ಕಷ್ಟಪಟ್ಟು ನಾನು ತಪ್ಪಿಸಿಕೊಂಡು ಬಂದಿದ್ದೇನೆ. ಅಲ್ಲಿ ನೋಡಿ ಅವನು ಬರುತ್ತಿದ್ದಾನೆ" ಎಂದು ಹೇಳಿದೆ.

ತಾಯಿ ಕಿಟಕಿಯ ಮೂಲಕ ನೋಡಿದರು. ಕರಿಯ ಆ ಕಡೆಗೆ ಬರುತ್ತಿದ್ದನು. ತಾಯಿ ಹೇಳಿದರು, "ಬರಲಿ ಬಿಡು, ಅವನೇನಾದರೂ ಉಪದ್ರವಿಸಿದರೆ ನಾನು ಶಿಕ್ಷಿಸುತ್ತೇನೆ. ಹೆದರಬೇಡ." ಅನಂತರ ತಾಯಿ ನನ್ನಿಂದ ಉಪ್ಪನ್ನು ಪಡೆದುಕೊಂಡರು. ಉಳಿದ ಹಣ ಕೊಡಲು ಹೇಳಿದರು. ಆಗ ನಾನು ತಬ್ಬಿಬ್ಬಾದೆ. "ಕರವಸ್ತ್ರದಲ್ಲಿ ಕಟ್ಟಿದ ಹಣವನ್ನು ಹಾಗೆಯೇ ಬಿಟ್ಟು ಬಂದಿದ್ದೇನಮ್ಮಾ" ಎನ್ನುತ್ತಾ ನಾನು ಕಣ್ಣೀರು ಸುರಿಸಿದೆ. ತಾಯಿ ಹೇಳಿದರು, "ಪರ್ವಾಗಿಲ್ಲ. ಈಗ ಹೋಗಿ ನೋಡು ಸಿಗಬಹುದು." ನಾನು ಹೇಳಿದೆ, "ಆದರೆ ದಾರಿಯಲ್ಲಿ ಆ ಕರಿಯ ಇದ್ದಾನಲ್ಲ."

ಅಷ್ಟು ಹೊತ್ತಿಗೆ ನಮ್ಮ ಮನೆಗೆ ಕರಿಯ ಪ್ರವೇಶಿಸಿದನು. ಅವನು ತಾಯಿಯೊಡನೆ ಹೇಳಿದನು, "ಸಲೀಮ್ ಕರವಸ್ತ್ರದಲ್ಲಿ ಕಟ್ಟಿದ ಹಣವನ್ನು ಅಂಗಡಿಯಲ್ಲೇ ಬಿಟ್ಟು ಬಂದಿದ್ದಾನೆ, ನಾನು ಅದನ್ನು ಎತ್ತಿಕೊಂಡೆ, ಅನಂತರ ಸಲೀಮ್‌ನನ್ನು ಕರೆದೆ. ಆದರೆ ಅವನು ನಿಲ್ಲಲೇ ಇಲ್ಲ. ತಗೊಳ್ಳಿ ಈ ಹಣ" ಎನ್ನುತ್ತಾ ಕರಿಯ ವಸ್ತ್ರವನ್ನು ಮುಂದು ಮಾಡಿದನು. ತಾಯಿ ನನ್ನತ್ತ ದೃಷ್ಟಿ ಬೀರಿದರು. ನಾನು ಸುಮ್ಮನೆ ನಿಂತು ಕರಿಯನನ್ನು ನೋಡುತ್ತಿದ್ದೆ. ಆಗ ನನಗೆ ಕರಿಯ ಒಕ್ಕಣ್ಣ ಸುಂದರ ಯುವಕನಂತೆ ಕಂಡನು. ಅಂದಿನಿಂದ ಅವನ ರೂಪ ಬಣ್ಣ ಎಲ್ಲವೂ ನನಗೆ ಬಹಳ ಇಷ್ಟ.

❖❖❖

ತೈಮೂರ್ ಮೇಷ್ಟ್ರು


ತೈಮೂರ್ ಎಂಬ ಒಬ್ಬ ಅಧ್ಯಾಪಕರು ಇದ್ದರು. ತೈಮೂರ್ ಎಂದ ತಕ್ಷಣ ನೀವು ನಗುತ್ತೀರಿ. ತೈಮೂರ್ ಕುಂಟನಾಗಿದ್ದ. ತೈಮೂರ್ ಎಂಬ ರಾಜನ ಬಗ್ಗೆ ನೀವು ಖಂಡಿತಾ ಓದಿದ್ದೀರಿ. ಆ ಕುಂಟ ರಾಜ ಎಷ್ಟು ಪ್ರಸಿದ್ಧನಾದನೆಂದರೆ ಇಂದಿಗೂ ಕುಂಟರನ್ನು ಅಣಕಿಸಲು ಜನ ಅವರನ್ನು ಕುಂಟ ತೈಮೂರ್ ಎನ್ನುತ್ತಾರೆ. ತೈಮೂರ್ ಎಂಬುದು ಆ ರಾಜನ ಹೆಸರು.

ಯಾರನ್ನಾದರೂ ಗೇಲಿ ಮಾಡುವುದು ಸರಿಯಲ್ಲ ಎಂದು ನಿಮಗೆ ತಿಳಿದಿದೆ. ಪ್ರವಾದಿ(ಸ) ಅದರಿಂದ ನಮ್ಮನ್ನು ತಡೆದಿದ್ದಾರೆ. ಯಾರನ್ನಾದರೂ ಗೇಲಿ ಮಾಡಿದರೆ ಅಲ್ಲಾಹನು ಸಿಟ್ಟಾಗುತ್ತಾನೆ. ಕೆಲವೊಮ್ಮೆ ಅಲ್ಲಾಹನು ಅದರ ಫಲವನ್ನು ಈ ಲೋಕದಲ್ಲೇ ನೀಡುತ್ತಾನೆ. ಇದೇ ವಿಷಯವನ್ನು ನಾನಿಂದು ನಿಮಗೆ ತಿಳಿಸುತ್ತೇನೆ.

ಹಾಗಾದರೆ ಕೇಳಿ! ಒಂದು ದಿನದ ಮಾತು. ಅಲ್ಲ, ಇದು ನಿತ್ಯದ ಸಂಗತಿ. ಕುಂಟರಾಗಿದ್ದ ನಮ್ಮ ಉರ್ದು ಅಧ್ಯಾಪಕರ ಕಾಲು ಮೊಣಗಂಟಿನಿಂದಲೇ ಕತ್ತರಿಸಲ್ಪಟ್ಟಿತ್ತು. ಊರುಗೋಲು ಹಿಡಿದುಕೊಂಡು ಅವರು ಶಾಲೆಗೆ ಬರುತ್ತಿದ್ದರು. ಬಗಲಲ್ಲಿ ಊರುಗೋಲನ್ನು ಇಟ್ಟು ಕುಪ್ಪಳಿಸಿದರೆ ಒಂದು ಗಜದಷ್ಟು ದೂರ ಹೋಗುತ್ತಿದ್ದರು. ಮತ್ತೊಮ್ಮೆ ಕಟ್ ಎಂಬ ಸದ್ದಿನೊಂದಿಗೆ ಊರುಗೋಲನ್ನು ಊರಿ ಪುನಃ ಹಾಗೆಯೇ ಮಾಡುತ್ತಿದ್ದರು. ಊರುಗೋಲಿನಿಂದ ಕಟ-ಕಟ ಸದ್ದು ಮಾಡುತ್ತಲೇ ಅವರು ತರಗತಿಯನ್ನು ಪ್ರವೇಶಿಸುತ್ತಿದ್ದರು.

ಶಾಲೆ ಇರಲಿ, ಮಾರುಕಟ್ಟೆ ಇರಲಿ, ಎಲ್ಲಾಕಡೆ ಕೆಟ್ಟ ವ್ಯಕ್ತಿಗಳಿರುತ್ತಾರೆ. ಒಳ್ಳೆಯವರಿಗಿಂತಲೂ ಕೆಟ್ಟವರ ಸಂಖ್ಯೆಯೇ ಅಧಿಕ. ಅವರಿಗೆ ದೇವಭಯವೂ ಇರುವುದಿಲ್ಲ. ಅವರು ದುರ್ಬಲರನ್ನು ಬಹಳ ಹಿಂಸಿಸುತ್ತಾರೆ. ನಾವು ದೊಡ್ಡವರು ನಮ್ಮನ್ನು ಯಾರು ಏನು ಮಾಡಿಯಾರು? ಎಂದು ಅವರು ಭಾವಿಸುತ್ತಾರೆ ಇದೆಲ್ಲಾ ನಿಮಗೂ ಗೊತ್ತಿದೆ.

ಹಿಂಸಿಸುವವರಿಗೆ ಕೆಲವೊಮ್ಮೆ ಭೂಲೋಕದಲ್ಲೇ ಅದರ ಪ್ರತಿಫಲ ಸಿಗುತ್ತದೆ ಎಂದು ನಾನೀಗ ಹೇಳಿದೆ. ನಮ್ಮ ಶಾಲೆಯಲ್ಲೂ ಹಾಗೆಯೇ ಆಯಿತು.



ಶಾಲೆಯಲ್ಲಿ ನಮ್ಮ ಜೊತೆ ಜಲಾಲ್ ಖಾನ್ ಎಂಬ ಒಬ್ಬ ಬಾಲಕನಿದ್ದ. ಬಹಳ ಕೆಟ್ಟವನಾಗಿದ್ದ ಜಲಾಲ್ ಖಾನ್‌ನ ಜೊತೆ ಹುಡುಗರ ಒಂದು ದಂಡೇ ಇತ್ತು. ನಮ್ಮ ತೈಮೂರ್ ಮೇಷ್ಟ್ರು ಊರುಗೋಲಿನ ಸಹಾಯದಿಂದ ಬರುತ್ತಿರುವಾಗ ಅವನು 'ತೈಮೂರ್' ಎಂದು ಹೇಳುತ್ತಿದ್ದ. ಅವನ ಜೊತೆಯ ಪಡ್ಡೆ ಹುಡುಗರು 'ಝಿಂದಾಬಾದ್' ಎಂದು ದನಿಗೂಡಿಸುತ್ತಿದ್ದರು.

ಅಧ್ಯಾಪಕರು ಇದನ್ನು ನಿತ್ಯ ಅನುಭವಿಸುತ್ತಿದ್ದರು. ಆದರೆ ನನಗೆ ಅವರು ಬಹಳ ಸಾಧು ಎನಿಸುತ್ತಿತ್ತು. ಒಮ್ಮೆಯೂ ಅವರು ಜಲಾಲ್ ಖಾನ್‌ಗಾಗಲೀ, ಇತರ ಹುಡುಗರಿಗಾಗಲೀ ಏನೂ ಹೇಳಿರಲಿಲ್ಲ.

ಅಧ್ಯಾಪಕರು 'ಝಿಂದಾಬಾದ್' ಎಂಬ ಅಣಕವನ್ನು ಕೇಳಿ ಮುಂದೆ ಸಾಗಿದ ನಂತರ ಜಲಾಲ್ ಖಾನ್ ಅವರಂತೆ ನಟಿಸುತ್ತಿದ್ದ. ತನ್ನ ಮೊಣಕಾಲನ್ನು ಮಡಚಿ ಕುಪ್ಪಳಿಸಿ ನಡೆಯುತ್ತಿದ್ದ.

ಒಮ್ಮೆ ಶಾಲೆಯಲ್ಲಿ ಅತಿರೇಕ ಸಂಭವಿಸಿ ಬಿಟ್ಟಿತು. ತುಂಬಿದ ತರಗತಿಯಲ್ಲಿ ಅಧ್ಯಾಪಕರೊಡನೆ ನಿಮ್ಮ ಕಾಲು ಹುಟ್ಟಿನಿಂದಲೇ ಅಥವಾ ಅನಂತರ ಕತ್ತರಿಸಲ್ಪಟ್ಟಿದ್ದೇ ಎಂದು ಜಲಾಲ್ ಖಾನ್ ಕೇಳಿಯೇ ಬಿಟ್ಟ.

ಅವನ ಜೊತೆ ಹುಡುಗರೆಲ್ಲ ಅಪಹಾಸ್ಯದ ನಗೆ ಬೀರಿದರು. ಆದರೆ ಆಶ್ಚರ್ಯವೆಂಬಂತೆ ಅಧ್ಯಾಪಕರಿಗೆ ಸ್ವಲ್ಪವೂ ಸಿಟ್ಟು ಬರಲಿಲ್ಲ. ಅವರು ಎಂದಿನಂತೆಯೇ ಇದ್ದರು.

ಜಲಾಲ್ ಖಾನ್‌ನ ಪ್ರಶ್ನೆಯನ್ನು ಕೇಳಿ ಪಾಠ ಮಾಡುತ್ತಿದ್ದ ಅಧ್ಯಾಪಕರು ಪುಸ್ತಕವನ್ನು ಮೇಜಿನ ಮೇಲೆ ಇರಿಸಿದರು. ಅನಂತರ ಅವರು ಬಹಳ ಸೌಮ್ಯವಾಗಿಯೇ ಹೇಳಿದರು:

ಜಲಾಲ್ ಖಾನ್! ಇಂದು ನೀನು ಬಹಳ ಒಳ್ಳೆಯ ಪ್ರಶ್ನೆ ಕೇಳಿರುವಿ. ನಾನೂ ನಿಮ್ಮಲ್ಲಿ ಯಾರಾದರೂ ಕೇಳಿದರೆ ಈ ವಿಷಯವನ್ನು ಹೇಳಬೇಕೆಂದಿದ್ದೆ. ಜಲಾಲ್ ಖಾನ್ ನನಗೆ ನಿನ್ನಿಂದ ಬಹಳ ಸಂತೋಷವಾಗಿದೆ. ನೀನು ಕೇಳಿರುವ ಪ್ರಶ್ನೆಯಿಂದ ಇತರ ಮಕ್ಕಳಿಗೂ ಪ್ರಯೋಜನವಾಗುತ್ತದೆ.

ಅಣಕಿಸಲಿಕ್ಕಾಗಿ ಪ್ರಶ್ನೆ ಕೇಳಿದ ಜಲಾಲ್ ಖಾನ್‌ನ ಮುಖ ಅಧ್ಯಾಪಕರ ಮಾತು ಕೇಳಿ ಸಪ್ಪೆಯಾಯಿತು. ಅವನು ತಲೆ ತಗ್ಗಿಸಿಕೊಂಡನು. ಇದನ್ನು ಕಂಡು ನನಗೆ ಜಲಾಲ್ ಖಾನ್ ಇನ್ನೂ ಸಂಪೂರ್ಣ ಕೆಟ್ಟು ಹೋಗಿಲ್ಲ. ಮಾನವೀಯತೆ ಅವನಲ್ಲಿ ಸ್ವಲ್ಪವಾದರೂ ಉಳಿದುಕೊಂಡಿದೆ ಎನಿಸಿತು.

ಅಧ್ಯಾಪಕರು ಮುಂದುವರಿಸಿದರು. ಪ್ರೀತಿಯ ಮಕ್ಕಳೇ! ಜಲಾಲ್‌ನ ಪ್ರಶ್ನೆಯ ಉತ್ತರವನ್ನು ನೀವೆಲ್ಲರೂ ಕೇಳಿ. ನಾನು ನಿಮ್ಮ ವಯಸ್ಸಿನವನಾಗಿದ್ದಾಗ ಇಂತಹುದೇ ಒಂದು ಶಾಲೆಯಲ್ಲಿ ಓದುತ್ತಿದ್ದೆ. ನಮಗೆ ನನ್ನಂತೆ ಕುಂಟರಾದ ಓರ್ವ ಅಧ್ಯಾಪಕರಿದ್ದರು. ನಾನು ಅವರನ್ನು ಅಣಕಿಸುತ್ತಿದ್ದೆ. ಅವರನ್ನು ಕಂಡು ಅಪಹಾಸ್ಯ ಮಾಡುತ್ತಿದ್ದೆ. ಇದನ್ನೆಲ್ಲಾ ಯಾವ ಧೈರ್ಯದಲ್ಲಿ ಮಾಡುತ್ತಿದ್ದೆನೆಂದರೆ ನನ್ನ ಮಾವ ಆ ಶಾಲೆಯ ಆಡಳಿತ ಸಮಿತಿಯ ಅಧ್ಯಕ್ಷರಾಗಿದ್ದರು. ನನಗೆ ಯಾರು ಏನು ಮಾಡಲು ಸಾಧ್ಯ ಎಂದು ನಾನು ಆಲೋಚಿಸುತ್ತಿದ್ದೆ. ಆದರೆ ಮಕ್ಕಳೇ! ಎಲ್ಲರೂ ಕೆಟ್ಟ ಮಕ್ಕಳೇ ಆಗಿರುವುದಿಲ್ಲವೆಂದು ನಿಮಗೆ ತಿಳಿದಿದೆ. ನನ್ನ ವರ್ತನೆಗಳನ್ನು ಕೆಲವರು ತಪ್ಪೆಂದು ಭಾವಿಸುತ್ತಿದ್ದರು. ಆ ಮೇಲೆ ಏನಾಯಿತು ಗೊತ್ತೇ? ಅದು ನೀವು ಕೇಳಬೇಕಾದದ್ದೇ!

ಒಂದು ದಿನ ನಾನು ಅಧ್ಯಾಪಕರ ನಡಿಗೆಯಂತೆ ನಟಿಸುತ್ತಿದ್ದೆ. ಒಂದು ಕಾಲಿನಿಂದ ಕುಪ್ಪಳಿಸಿ ನಡೆಯುತ್ತಿದ್ದೆ. ಒಬ್ಬ ಹುಡುಗ ಬಂದು ಕಾಲು ತಾಗಿಸಿದ. ನಾನು ಜೋರಾಗಿ ಬಿದ್ದುಬಿಟ್ಟೆ. ಅಂಗಾತ ಬಿದ್ದ ನನ್ನ ಅಡಿಯಲ್ಲಿ ಮುದುಡಿದ್ದ ಕಾಲು ಸಿಕ್ಕಿಹಾಕಿಕೊಂಡು ಅಪ್ಪಚ್ಚಿಯಾಯಿತು. 'ಲಡಾಕ್' ಎಂಬ ಜೋರಾದ ಸದ್ದಿನೊಂದಿಗೆ ನಾನು ಮೂರ್ಛೆ ಹೋದೆ.

ನನಗೆ ಪ್ರಜ್ಞೆ ಬಂದಾಗ ನಾನು ಆಸ್ಪತ್ರೆಯಲ್ಲಿದ್ದೆ. ನನ್ನ ದೇಹದ ಅಲ್ಲಲ್ಲಿ ಗಾಯಗಳಾಗಿದ್ದವು. ಆದರೆ ಕಾಲಿಗೆ ತೀವ್ರ ಪೆಟ್ಟಾಗಿತ್ತು. ಅದಕ್ಕೆ ಪ್ಲಾಸ್ಟರ್ ಹಾಕಿ ಕಟ್ಟಲಾಗಿತ್ತು. ನನಗೆ ಸರಿಯಾಗಿ ನೆನಪಿಲ್ಲ. ಸುಮಾರು ಒಂದು ಅಥವಾ ಒಂದೂವರೆ ತಿಂಗಳ ನಂತರ ಪ್ಲಾಸ್ಟರ್ ಬಿಚ್ಚಲಾಯಿತು. ಆಗ ಇನ್ನೂ ಕಾಲು ಊದಿಕೊಂಡಿತ್ತು. ಇದನ್ನು ಕಂಡು ವೈದ್ಯರು ವಿಷ ಪಸರಿಸುತ್ತಿದೆ ಎಂದು ಹೇಳಿದರು. ಕೊನೆಗೆ ಮೊಣಗಂಟಿನಲ್ಲೇ ನನ್ನ ಕಾಲನ್ನು ಕತ್ತರಿಸಲಾಯಿತು. ಇಲ್ಲದಿದ್ದರೆ ವಿಷ ಇಡೀ ದೇಹಕ್ಕೆ ಹರಡಿ ನಾನು ಸಾಯುತ್ತಿದ್ದೆ. ದೇವನ ದಯೆಯಿಂದ ಒಂದು ಕಾಲು ಕಳಕೊಂಡ ಬಳಿಕ ಅಧ್ಯಾಪಕರನ್ನು ಅಣಕಿಸಬಾರದು ಎಂದು ನಾನು ಬುದ್ಧಿ ಕಲಿತಿದ್ದೆ.

ಮಕ್ಕಳೇ! ಪ್ರತಿಯೊಂದು ಕೆಡುಕಿನ ಪ್ರತಿಫಲ ಸಿಕ್ಕೇ ಸಿಗುತ್ತದೆ ಎಂದು ನಿಮಗೆ ತಿಳಿದಿದೆ. ಪೂರ್ಣ ಪ್ರತಿಫಲ ಆಖಿರತ್(ಪರಲೋಕ)ನಲ್ಲಿ ಸಿಗುತ್ತದೆ. ಆದರೆ ಕೆಲವೊಮ್ಮೆ ಈ ಲೋಕದಲ್ಲೇ ಸಿಕ್ಕಿ ಬಿಡುತ್ತದೆ. ನನ್ನನ್ನೇ ನೋಡಿ! ನನಗೆ ತಕ್ಕ ಶಾಸ್ತಿ ಸಿಗಲಿಲ್ಲವೇನು? ಪರಲೋಕದಲ್ಲಿ ನನ್ನನ್ನು ಕ್ಷಮಿಸಿ ಬಿಡು ದೇವಾ. ಏಕೆಂದರೆ ಅಲ್ಲಿನ ಯಾತನೆ ಭಯಾನಕವಾದುದು ಎಂದು ನಾನು ಯಾವತ್ತೂ ಪ್ರಾರ್ಥಿಸುತ್ತೇನೆ. ಮಕ್ಕಳೇ! ನಿಮ್ಮ ಅಧ್ಯಾಪಕನಾದ ನನ್ನನ್ನು ಕ್ಷಮಿಸಿ ಬಿಡುವಂತೆ ಅಲ್ಲಾಹನಲ್ಲಿ ಪ್ರಾರ್ಥಿಸಿರಿ.

"ಮಗನೇ! ನೀನು ಪ್ರಶ್ನೆ ಕೇಳಿದವನಲ್ಲವೇ, ನೀನೂ ಅಲ್ಲಾಹನಲ್ಲಿ ಪ್ರಾರ್ಥಿಸು. ಮನಃ ಪೂರ್ವಕವಾಗಿ ನನಗಾಗಿ ಮೊರೆ ಇಡು."

ಅಧ್ಯಾಪಕರು ಇಷ್ಟು ಹೇಳಿ ಮೌನವಾದರು. ನಾನು ಜಲಾಲ್ ಖಾನ್‌ನನ್ನು ನೋಡಿದೆ. ಅವನು ತನ್ನ ಪುಸ್ತಕದ ಚೀಲಕ್ಕೆ ತಲೆ ಬಗ್ಗಿಸಿದ್ದನು. ಅವನ ಕಣ್ಣಿನಿಂದ ಕಣ್ಣೀರು ತೊಟ್ಟಿಕ್ಕುತ್ತಿತ್ತು. ಬಹಳ ಹೊತ್ತು ತರಗತಿಯಲ್ಲಿ ಮೌನ ಆವರಿಸಿತ್ತು. ಅನಂತರ ಜಲಾಲ್ ಖಾನ್ ಎದ್ದು ನಿಂತು "ಅಧ್ಯಾಪಕರೇ! ನನ್ನನ್ನು ಕ್ಷಮಿಸಿ" ಎಂದು ಹೇಳಿದ. ಅದೇ ಹೊತ್ತಿಗೆ ಮಧ್ಯಂತರದ ಗಂಟೆ ಬಾರಿಸಿತು. ನಾವೆಲ್ಲ ತರಗತಿಯಿಂದ ಹೊರನಡೆದೆವು. ಆದರೆ ಜಲಾಲ್ ಖಾನ್ ಇನ್ನೂ ಅಲ್ಲೇ ಕುಳಿತು ಕಂಬನಿಗರೆಯುತ್ತಿದ್ದ. "ನಿನ್ನನ್ನು ಕ್ಷಮಿಸಿದೆ ಮಗನೇ" ಎಂದು ಅಧ್ಯಾಪಕರು ಹೇಳಿದ ನಂತರವೇ ಅವನು ಸುಮ್ಮನಾದ. ಅನಂತರ ಅವನು ಯಾರನ್ನೂ ಅಣಕಿಸಿಲ್ಲ. ದುರ್ಬಲರನ್ನು ಹಿಂಸಿಸಿಲ್ಲ.

❖❖❖

ಮಹಾ ಮೂರ್ಖ



ಒಬ್ಬ ಧನಿಕ ಒಬ್ಬನನ್ನು ಸೇವಕನಾಗಿ ನೇಮಿಸಿದನು. ಆ ಸೇವಕ ತನ್ನ ಮೂರ್ಖತನಕ್ಕಾಗಿ ಊರಲ್ಲೇ ಪ್ರಸಿದ್ಧನಾಗಿದ್ದನು. ಧನಿಕ ಅವನಿಗೆ ಒಂದು ಬೆತ್ತವನ್ನು ಕೊಟ್ಟು ಹೇಳಿದನು, "ಇದನ್ನು ನಿನಗಿಂತ ಹೆಚ್ಚು ಮೂರ್ಖನಾದವನಿಗೆ ನೀಡಬೇಕು."

ಆರು ತಿಂಗಳ ನಂತರ ಧನಿಕ ರೋಗ ಪೀಡಿತನಾದನು. ಅವನು ಮೂರ್ಖ ಸೇವಕನನ್ನು ಕರೆಸಿ ಹೇಳಿದನು, "ನಾನು ನಿನ್ನಿಂದ ಅಗಲುತ್ತಿದ್ದೇನೆ."

ಅವನು ಕೇಳಿದನು, "ಯಾವಾಗ ಮರಳಿ ಬರುತ್ತೀರಿ?"

ಧನಿಕ ಉತ್ತರಿಸಿದನು: "ಯಾರೂ ಮರಳಿ ಬರಲಾರದಂತಹ ಜಾಗಕ್ಕೆ ನಾನು ಹೋಗುತ್ತಿದ್ದೇನೆ."

ಮೂರ್ಖ ಸೇವಕ ಕೇಳಿದನು, "ಅಲ್ಲಿ ನಿಮ್ಮ ವಾಸಕ್ಕೆ ಮನೆ ಕಟ್ಟಿಕೊಂಡಿದ್ದೀರಾ?"

'ಇಲ್ಲ' ಧನಿಕನೆಂದನು.